

# ಸಿಹಿ ಕಹಿ

ಕನ್ನಡ ದಿನಪತ್ರಿಕೆ, ಬಾಗಲಕೋಟೆ

ಬಾಗಲಕೋಟೆಯಿಂದ ಪ್ರಕಟಿತ

RNI REG No. : KARKAN/2016/75068

SIHI KAHI

KANNADA DAILY MORNING

BAGALKOT

ಸಂಪಾದಕರು : ಮಾರುತಿ ಬಸವಂತಪ್ಪ ಹೊಸಮನಿ

Editor : MARUTI BASAVANTAPPA HOSAMANI

Cell : +91 9741319119

Volume : 08 Issue : 19 Tuesday 23-09-2025 E-mail : maruti.b.hosamani76@gmail.com Page: 4 Price : Rs. 1/-


# ಬಾರಿ ಮಳೆಯಿಂದ ಮನೆ ಒಳಗೆ ನುಗ್ಗಿರುವ ನೀರು–ಜನರಲ್ಲಿ ಆಂತಕ



**ಸಿಹಿ ಕಹಿ ಸುದ್ದಿ,**

**ತಾರಪುರ :** ಆಲಮೇಲ ತಾಲೂಕಿನ ತಾರಾಪೂರ ಗ್ರಾಮದಲ್ಲಿ ಶುಕ್ರವಾರ ರಾತ್ರಿ ಸುರಿದ ಮಳೆಯಿಂದ ಲಾಲಪ್ಪ.ನಿಜಪ್ಪ ಹರಿಜನ ಎಂಬುವರ ಮನೆಗೆ ಏಕಾಏಕಿಯಾಗಿ ಮಳೆ ನೀರು ನುಗ್ಗಿರುವುದರಿಂದ ಮನೆಯಲ್ಲಿ ಮೊಣಕಾಲು ಮಟ್ ನೀರು ನಿಂತಿರುವುದ ರಿಂದ ಬೆಳಗಿನ ಜಾವದ ವರೆಗೆ ಮಕ್ಕಳೊಂದಿಗೆ ಕುಟುಂಬಸ್ಥರು ಜಾಗರಣೆ ಮಾಡುವ ಪರಿಸ್ಥಿತಿ ನಿರ್ಮಾಣವಾಗಿದೆ. ಮನೆ ಒಳಗೆ ನುಗ್ಗಿದ ನೀರನ್ನು ಹೊರ ಹಾಕಲು ಹರ ಸಾಹಸ ಪಡುವಂತ ಪರಿಸ್ಥಿತಿ ನಿರ್ಮಾಣವಾಗಿತ್ತು.

ನೀರಿನಿಂದ ಮನೆಯಲ್ಲಿ ಇಟ್ಟ ಜೋಳ ಗೋಧಿ ಹಾಗೂ ಇನ್ನಿತರ ಕಾಳು ಕಡಿಗಳು ಹಾಳಾಗಿದ್ದು ಮನೆಯೊಳಗೆ ನೀರು ನುಗ್ಗಿರುವ ಕಾರಣ ಗಂಗಪ್ಪ ಗೌರ ಎಂಬುವರ ಮನೆಯ ಗೋಡಿ ಕುಸಿದು ಬಿದ್ದಿರುತ್ತವೆ ಸ್ಥಳಕ್ಕೆ ಆಲಮೇಲ ತಹಶೀಲ್ದಾರ್ ಸಾಹೇಬರ ಸೂಚನೆ ಮೇರೆಗೆ ಗ್ರಾಮ ಲೆಕ್ಕಾಧಿಕಾರಿಯಾದ ಮಡಿವಾಳಪ್ಪ ಬಿರಾದಾರ ಸ್ಥಳಕ್ಕೆ ಭೇಟಿ ನೀಡಿ ಪರಿಶೀಲಿಸಿದರು ಕೂಡಲೇ ಮೇಲಾಧಿಕಾರಿಗಳು ಗಮನಕ್ಕೆ ತರುತ್ತೇನೆ ಎಂದು ಹೇಳಿದರು ಸತತವಾಗಿ ಒಂದು ವಾರದಿಂದ ಸುರಿಯುತ್ತಿರುವ ಮಳೆ ರೈತರಿಗೂ ಹಾಗೂ ಗ್ರಾಮಸ್ಥರಿಗೂ ಇನ್ನು ಏನಾಗುತ್ತೋ ಎನ್ನುವ ಆಂತಕದಲ್ಲಿ ಜನರು ಕಾಲ ಕಳೆಯುವು ಪರಿಸ್ಥಿತಿ ನಿರ್ಮಾಣವಾಗಿದೆ.

ಇದರಿಂದ ಭೀಮಾ ನದಿ ತೀರದ ಗ್ರಾಮಗಳ ಜನರಿಗೆ ಬಹಳ ತೊಂದರೆ ಯಾಗುತ್ತಿದ್ದು. ಮಹಾರಾಷ್ಟ್ರದಲ್ಲಿ ಅತಿ ಹೆಚ್ಚಿನ ಮಳೆ ಯಾಗುತ್ತಿರುವುದರಿಂದ ಭೀಮಾ ನದಿಗೆ ಉಜ್ಜನಿ ಡ್ಯಾಮಿನಿಂದ ನೀರು ಬಿಡಬಹುದು ಎಂಬ ಆತಂಕ ಒಂದು ಕಡೆಯಾದರೆ ಸತತವಾಗಿ ಭಾರಿ ಮಳೆಯಾಗುತ್ತಿರುವರಿಂದ ಭಯ ಇನ್ನೊಂದೆಡೆ.

ವರ್ಷವಿಡಿ ಭೀಮಾ ತೀರದ ಜನತೆ ಭಯದಿಂದ ಬದುಕುವಂತ ಪರಿಸ್ಥಿತಿ ಎದುರಾಗುತ್ತಿದೆ ತಕ್ಷಣ ಸಂಬಂಧಪಟ್ಟ ಅಧಿಕಾರಿಗಳು ಸರ್ಕಾರದಿಂದ ಸೂಕ್ತ ಪರಿಹಾರ ಒದಗಿಸ ಬೇಕೆಂದು ಗ್ರಾಮಸ್ಥರು ಹಾಗೂ ರೈತರು ಆಗ್ರಹಿಸಿದ್ದಾರೆ.

**ತಾಲೂಕ ವರದಿಗಾರರು, ಸಿಹಿ ಕಹಿ ಕನ್ನಡ ದಿನ ಪತ್ರಿಕೆ ಹಾಗೂ ಎಸ್.ಕೆ ನ್ಯೂಸ್ ಕನ್ನಡ ಚಾನಲ್: ರೇವಣಸಿದ್ದಯ್ಯ.ಜಿ ಹಿರೇಮಠ ಆಲಮೇಲ**

# ನಾಡಹಬ್ಬದಲ್ಲಿ ರಾಜಕಾರಣ ಬೇಡ

**ಮೈಸೂರು:** ಗೋಡಾ ಹೈ–ಮೈದಾನ್ ಹೈ: ಬನ್ನಿ ಚುನಾವಣೆಯಲ್ಲಿ ರಾಜಕಾರಣ ಮಾಡೋಣ.ನಾಡ ಹಬ್ಬದ ವಿಚಾರದಲ್ಲಿ ಕೆಟ್ಟ ರಾಜಕಾರಣ ಬೇಡ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಸವಾಲು ಎಸೆದರು. ತಾಯಿ ಚಾಮುಂಡೇಶ್ವರಿಗೆ ಪೂಜೆ ಸಲ್ಲಿಸಿದ ಬಳಿಕ ನಾಡಹಬ್ಬ ಐತಿಹಾಸಿಕ ದಸರಾ ಉದ್ಘಾಟನೆಬಳಿಕವೇದಿಕೆಕಾರ್ಯಕ್ರಮದಲ್ಲಿ ಮಾತನಾಡಿದರು.ದಸರಾ ಮತ್ತು ನಮ್ಮ ಸಾಂಸ್ಕೃತಿಕ ಹಿರಿಮೆಯ ಪರಿಚಯ ಇಲ್ಲದವರು ಬಾನು ಮುಷ್ತಾಕ್ ಅವರಿಗೆ ವಿರೋಧಿಸಿದ್ದರು.

ಇತಿಹಾಸ ತಿರುಚಿ, ಸ್ವಾರ್ಥ ರಾಜಕೀಯ ಮಾಡುವುದು ಅಕ್ಷಮ್ಯ ಅಪರಾಧ.

ರಾಜಕಾರಣ ಮಾಡುವುದಿದ್ದರೆ ಚುನಾವಣೆಯಲ್ಲಿ ಮಾಡೋಣ. ನಾಡ ಹಬ್ಬದ ವಿಚಾರದಲ್ಲಿ ಕೆಳ ಮಟ್ಟದ ರಾಜ–ಕಾರಣ ಮಾಡುವುದು ಕ್ಷುಲ್ಲಕ ಎಂದರು.

ನಾಡಿನ ಬಹುಸಂಖ್ಯಾತ ಸಮುದಾಯ ಬಾನು ಮುಷ್ತಾಕ್ ಅವರಿಂದ ದಸರಾ ಉದ್ಘಾಟಿಸಿರುವುದನ್ನು ಸ್ವಾಗತಿಸಿದೆ.

ಇದು ಹೆಮ್ಮೆಯ ಸಂಗತಿ.ಅಂತಾರಾಷ್ಟ್ರೀಯ ಬೂಕರ್ ಪ್ರಶಸ್ತಿ ಪುರಸ್ಕೃತರಾದ ಬಾನು ಮುಷ್ತಾಕ್ ಅವರು ದಸರಾ ಉದ್ಘಾಟಿಸಿರುವುದು ಸೂಕ್ತವಾಗಿದೆ. ಬಾನು ಮುಷ್ತಾಕ್ ಮುಸ್ಲಿಂ ಮಹಿಳೆ ಎನ್ನುವುದಕ್ಕಿಂತ ಮಾನವೀಯ ಮೌಲ್ಯ ಪಾಲಿಸುವ ಮನುಷ್ಯರು.

ನಾವು ಮನುಷ್ಯರು ಪರಸ್ಪರ ಪ್ರೀತಿಯಿಂದ ಬಾಳಬೇಕು. ದ್ವೇಷ ಮನುಷ್ಯತ್ವದ ವಿರೋಧಿ. ಆದ್ದರಿಂದ ದ್ವೇಷವನ್ನು ಆಚರಿಸುವವರು ಮನುಷ್ಯತ್ವದ ವಿರೋಧಿಗಳು ಎಂದರು.



ಸಂವಿಧಾನದ ಮೌಲ್ಯಗಳಾದ ಸಹಿಷ್ಣತೆ–ಸಹಬಾಳ್ವೆ ಪಾಲಿಸುವವರು ಮಾತ್ರ ಅಪ್ಪಟ ಭಾರತೀಯರು.

ನಮ್ಮ ಸಂವಿಧಾನ ಜಾತ್ಯತೀತ ಮತ್ತು ಧರ್ಮಾತೀತ. ಇದನ್ನೇ ಹೈಕೋರ್ಟ್–ಸುಪ್ರೀಂಕೋರ್ಟ್ ಎತ್ತಿಹಿಡಿದಿದೆ.

ಯಾರಿಗೆ ಭಾರತೀಯರು ಎನ್ನುವ ಹೆಮ್ಮೆ ಇರುತ್ತದೋ ಅವರಿಗೆ ಮಾತ್ರ ಸಂವಿಧಾನದ ಬಗ್ಗೆ ಹೆಮ್ಮೆ ಇರುತ್ತದೆ. ನಮಗೆ ನಮ್ಮ ಹಕ್ಕು ಮತ್ತು ಜವಾಬ್ದಾರಿಗಳು ಗೊತ್ತಾಗಬೇಕಾದರೆಸಂವಿಧಾನ ಗೊತ್ತಿರಬೇಕು ಎಂದರು.

**ಗುಡಿ–ಚರ್ಚು–ಮಸೀದಿಗಳ ಬಿಟ್ಟು ಹೊರ ಬನ್ನಿ:**

ನಮ್ಮದು ಸರ್ವ ಜನಾಂಗದ ಶಾಂತಿಯ ತೋಟ: ಕುವೆಂಪು ಮಾತನ್ನು ಉಲ್ಲೇಖಿಸಿ ಚಾಟಿ ಬೀಸಿದ ಸಿಎಂ. ರಾಷ್ಟ್ರಕವಿ ಕುವೆಂಪು ಅವರ ಮಾತನ್ನು ನಾವು ಮರೆಯಬಾರದು. ಗುಡಿ–ಚರ್ಚು–ಮಸೀದಿಗಳ ಬಿಟ್ಟು ಹೊರ ಬನ್ನಿ ಎಂದು ಕರೆ ನೀಡಿದ ಸಿಎಂ, ಕುವೆಂಪು ಅವರ ಆಶಯದ ಸರ್ವ ಜನಾಂಗದ ಶಾಂತಿಯ ತೋಟವನ್ನಾಗಿ ರಾಜ್ಯವನ್ನು ಗಟ್ಟಿಗೊಳಿಸಬೇಕು ಎಂದು ಕುವೆಂಪು ಅವರ ಮಾತನ್ನು ಉಲ್ಲೇಖಿಸಿದ ಮುಖ್ಯಮಂತ್ರಿಗಳ ುಜಾತ್ಯತೀತತೆಯ ವಿರೋಧಿಗಳಿಗೆ ಚಾಟಿ ಬೀಸಿದರು.

**ಬಿಜೆಪಿ ಯವರು ಗ್ಯಾರಂಟಿ ಫಲಾನುಭವಿಗಳ್ವಾ:**ಸಂವಿಧಾನದ ಆಶಯದಂತೆ ಎಲ್ಲಾ ಜಾತಿ,

ಎಲ್ಲಾ ಧರ್ಮದ ಮತ್ತು ಎಲ್ಲಾ ಪಕ್ಷದ ಬಡವರಿಗೆ ನಾವು ಗ್ಯಾರಂಟಿ ಗಳನ್ನು ಜಾರಿ ಮಾಡಿದ್ದೇವೆ.

ಬಿಜೆಪಿಯವರು ಗ್ಯಾರಂಟಿಗಳ ಫಲಾನುಭವಿಗಳಲ್ಲವೇ ಎಂದು ಸಿಎಂ ಪ್ರಶ್ನಿಸಿದರು.

ಈ ಗ್ಯಾರಂಟಿಗಳು ನಿಲ್ಲುವುದಿಲ್ಲ.

ನಮ್ಮ ಗ್ಯಾರಂಟಿಗಳಿಂದಾಗಿ ನಮ್ಮ ರಾಜ್ಯದ ನಮ್ಮ ಜನಗಳ ತಲಾ ಆದಾಯ ದೇಶದಲ್ಲೇ ನಂಬರ್ ಒನ್ ಆಗಿದೆ.

ಈಗ ಜಿಡಿಪಿ ಯಲ್ಲಿ ದೇಶದಲ್ಲೇ ನಂಬರ್ ಒನ್ ಆಗಿದ್ದೇವೆ ಎಂದು ಮೆಚ್ಚುಗೆ ವ್ಯಕ್ತಪಡಿಸಿದರು.

# ಅ. 30 ರ ಕೊನೆಯ ದಿನ

## ಸಿ.ಡಿ.ಪಿ.ಓ ಶಿವಮೂರ್ತಿ ಕುಂಬಾರ ಬುಲಾವ್

**ಸಿಹಿ ಕಹಿ ಸುದ್ದಿ,**

**ಮುದ್ದೇಬಿಹಾಳ :** ಭಾಗ್ಯ ಲಕ್ಷ್ಮಿ ಯೋಜನೆಯಡಿಯಲ್ಲಿ ಬರುವ ಸನ್ 2006 – 2007 ನೇ. ಸಾಲಿನಲ್ಲಿ ಜನಿಸಿದ ಭಾಗ್ಯಲಕ್ಷ್ಮಿ ಫಲಾನುಭವಿಗಳಿಗೆ 18 ವರ್ಷ ಪೂರ್ಣ ಗೊಂಡಿ–ದ್ದು. ಫಲಾನುಭವಿಗಳಿಗೆ ಪರಿಪಕ್ವ ಮೊತ್ತವನ್ನು ಪಡೆಯಲು ಅಕ್ಟೋಬರ್ 30 ಕೊನೆಯ ದಿನಾಂಕವನ್ನು ನಿಗದಿ ಪಡಿಸಲಾಗಿದೆ. ಅರ್ಹ ಫಲಾನುಭವಿಗಳು ಅಕ್ಟೋಬರ್ 30 ರ ಒಳಗೆ ದಾಖಲೆಗಳನ್ನು ಮುದ್ದೇಬಿಹಾಳ ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳ ಕಚೇರಿಗೆ ಭೇಟಿ ನೀಡಿ ಅರ್ಜಿ




ಸಲ್ಲಿಸಬೇಕು. ಅವಧಿ ಮುಗಿದ ಮೇಲೆ ಬಂದ ಅರ್ಜಿಗಳನ್ನು ಪರಿಗಣಿಸುವುದಿಲ್ಲಾ, ಎಂದು ಶಿಶು ಅಭಿವೃದ್ಧಿ ಯೋಜನಾಧಿಕಾರಿ ಶಿವಮೂರ್ತಿ ಕುಂಬಾರ್ ಅವರು ಪತ್ರಿಕಾ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

**ತಾಲೂಕ ವರದಿಗಾರರು, ಸಿಹಿ ಕಹಿ ಕನ್ನಡ ದಿನ ಪತ್ರಿಕೆ ಹಾಗೂ ಎಸ್.ಕೆ ನ್ಯೂಸ್ ಕನ್ನಡ ಚಾನಲ್: ಬಸವರಾಜ.ಸಂಕನಾಳ. ಮುದ್ದೇಬಿಹಾಳ**

# ಜೆವಿ ಮಂಡಳದಲ್ಲಿ ಅಭಿಯಂತರ ದಿನಾಚರಣೆ

**ತೇರದಾಳ :** ಜ್ಞಾನವಂತರಲ್ಲಿ ಅಹಂಭಾವ ಇರಬಾರದು. ಬದಲಾಗಿ ಅವರಲ್ಲಿನ ಜ್ಞಾನವನ್ನು ಸಮಾಜದ ಒಳಿತಿಗಾಗಿ, ಏಳಿಗೆಗಾಗಿ ಬಳಸಿಕೊಂಡಾಗ ಮಾತ್ರ ಅವರನ್ನು ಜ್ಞಾನಿ ಎನ್ನಲು ಸಾಧ್ಯ. ಆ ದಿಶೆಯಲ್ಲಿ ಬದುಕು ಕಟ್ಟಿಕೊಂಡವರು ಸರ್. ಎಂ. ವಿಶ್ವೇಶ್ವರಯ್ಯನವರು ಎಂದು ತೇರದಾಳ ಪೊಲೀಸ್ ಠಾಣೆಯ ಪಿಎಸ್ಐ ಎಸ್. ಕೆ. ಸಿಂಗನ್ನವರ ಹೇಳಿದರು.

ಪಟ್ಟಣದ ಜೆ.ವಿ. ಮಂಡಳ ಪಾಲಿಟೆಕ್ನಿಕ್ ಕಾಲೇಜ್ ಹಾಗೂ ಸಿವಿಲ್ ಇಂಜಿನಿಅರ್ಸ್ ಅಸೋಸಿಯೇಶನ್ ಅಡಿಯಲ್ಲಿ ಹಮ್ಮಿಕೊಂಡಿದ್ದ ಅಭಿಯಂತರರ ದಿನಾಚರಣೆ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ನವಭಾರತದ ಶಿಲ್ಪಿ ಎಂದೇ ಹೆಸರು ಮಾಡಿದ್ದ ವಿಶ್ವೇಶ್ವರಯ್ಯ ಅವರ ಕೊಡುಗೆಗಳು ಇಂದಿಗೂ ಅಜರಾಮರವಾಗಿವೆ ಎಂದು ಹೇಳಿಕೊಳ್ಳುವುದೆ ಒಂದು ಹೆಮ್ಮೆಯ




ವಿಷಯ. ಅವರಂಥ ಶ್ರೇಷ್ಠರನ್ನು ಕಂಡ ನಾಡು ನಮ್ಮದು ಎಂದು ಬಣ್ಣಿಸಿದರು. ಪುರಸಭೆ ಅಭಿಯಂತರೆ ಭಾಗ್ಯಶ್ರೀ ಪಾಟೀಲ ಮಾತನಾಡಿ, ತ್ಯಾಜ್ಯ ಎಂಬುದು ಇಂದು ದೇಶಕ್ಕೆ ಒಂದು ದೊಡ್ಡ ಸವಾಲಾಗಿ ಪರಿಣಮಿಸಿದೆ. ಅಭಿಯಂತರರಾದವರು ಈ ಕುರಿತು ಒಂದಿಷ್ಟು ಹೊಸ ಹೊಸ ಬಗೆಯ ವಿಚಾರಗಳನ್ನು, ಸಂಶೋಧನೆಯನ್ನು ಅಳವಡಿಸಿಕೊಂಡು ಕಟ್ಟಡದ ವಿಚಾರದಲ್ಲಿಯೂ ತ್ಯಾಜ್ಯವನ್ನು ಮರು ಬಳುಸುವಂಥ ವಿಧಾನ ಕಂಡು ಕೊಳ್ಳಬೇಕಾದ ಅವಶ್ಯಕತೆ ಇದೆ ಎಂದು ಹೇಳಿದರು. ಸಂಸ್ಥೆ ಕಾರ್ಯದರ್ಶಿ ಡಾ. ಜೆ. ಬಿ. ಆಲಗೂರ ಪ್ರತಿದಿನ ನಾವು ಮಾಡುವ ಪ್ರತಿಯೊಂದು ಚಟುವಟಿಕೆಯಲ್ಲಿ ಇಂಜಿನಿಯರ್ಗಳ ಕೊಡುಗೆ ಇರುತ್ತದೆ ಎಂಬುದು ಗಮನಿಸಬೇಕಾದ ಅಂಶವಾಗಿದೆ. ಈ ಭಾಗದ ವಿದ್ಯಾರ್ಥಿಗಳಿಗೆ ಸಮಾಜದಲ್ಲಿ ಉಜ್ವಲ ಬದುಕು ಕಟ್ಟಿಕೊಡುವ ಕೆಲಸ ಜೆವಿ ಮಂಡಳ ಮಾಡುತ್ತಿದೆ ಎಂದು ಹೇಳಿದರು. ಪುರಸಭೆ ಅಧ್ಯಕ್ಷೆ ಶಿಲ್ಪಾ ರೋಡಕರ ಮಾತನಾಡಿದರು.

ಕಾಲೇಜಿನಪ್ರಾಚಾರ್ಯಮೌನೇಶಬಡಿಗೇರ ಪ್ರಾಸ್ತಾವಿಕವಾಗಿ ಮಾತನಾಡಿದರು. ಸಂಸ್ಥೆ ಅಧ್ಯಕ್ಷಟಿ.ಸಿ.ಪಡಸಲಗಿಅಧ್ಯಕ್ಷತೆವಹಿಸಿದ್ದರು. ಕಾರ್ಯಾಧ್ಯಕ್ಷ ಡಿ. ಆರ್. ಪಾಟೀಲ, ಪ್ರವೀಣ ನಾಡಗೌಡ, ಮಹಾಲಿಂಗಪುರ ಸಿವಿಲ್ ಇಂಜಿನಿಅರ್ಸ್ ಸಂಘದ ಅಧ್ಯಕ್ಷ ಶಿವಾನಂದ ಕನ್ನಾಳ, ರಬಕವಿ–ಬನಹಟ್ಟಿ ಇಂಜಿನೀಯರ್ಸ ಸಂಘದ ಉಪಾಧ್ಯಕ್ಷ ಸುರೇಶ ಪಟ್ಟಣಶೆಟ್ಟಿ,

ತೇರದಾಳ ಸಂಘದ ಅಧ್ಯಕ್ಷ ವಿಠ್ಠಲ ರೇಳೇಕರ,

ಕಿರಣ ಕುಳ್ಳಿ,

ಪದ್ಮರಾಜ ಹಟ್ಟಿ ಇನ್ನಿತರರು ಉಪಸ್ಥಿತ–ರಿದ್ದರು.

# ತೇರದಾಳದಲ್ಲಿ ಶಿಕ್ಷಣ ಸಂಸ್ಕಾರ ಶಿಬಿರ ಹಾಗೂ ಶಿಷ್ಯ ವೇತನ ಕಾರ್ಯಕ್ರಮ



**ತೇರದಾಳ :** ಅತ್ಯಂತ ಪ್ರಾಚೀನ ಧರ್ಮ ಎನಿಸಿಕೊಂಡಿರುವ ಜೈನ್ ಧರ್ಮವು ತನ್ನದೆಯಾದ ಇತಿಹಾಸ ಹೊಂದಿದೆ. ಆದ್ದರಿಂದಲೇ ಅನ್ಯ ಧರ್ಮದವರು ಕೂಡ ಜೈನ್ ಧರ್ಮದ ತತ್ವಗಳನ್ನು ಪಾಲಿಸಿ ಮುನಿಗಳಾಗಿರುವ ಉದಾಹರಣೆಗಳಿವೆ ಎಂದು ದೆಹಲಿಯ ದಿಗಂಬರ ಮಹಾಸಮಿತಿ ಕಾರ್ಯ ನಿರ್ವಾಹಕ ಅಧ್ಯಕ್ಷ ವಿಪಿನ್ಕುಮಾರ ಜೈನ್ ಸರಾಫ್ ಹೇಳಿದರು.

ಇಲ್ಲಿನ ದಾನಿಗೊಂಡ ಸಮೂಹ ಶಿಕ್ಷಣ ಸಂಸ್ಥೆಯಲ್ಲಿ ದಿಗಂಬರ ಜೈನ ಮಹಾ ಸಮಿತಿ ಕರ್ನಾಟಕ ಅಂಚಲ ಸ್ವರ್ಣ ಜಯಂತಿ ನಿಮಿತ್ಯವಾಗಿ ಹಮ್ಮಿಕೊಂಡಿದ್ದ ಶಿಕ್ಷಣ ಸಂಸ್ಕಾರ ಶಿಬಿರ ಹಾಗೂ ವಿದ್ಯಾರ್ಥಿಗಳಿಗೆ ಶಿಷ್ಯ ವೇತನ ಮತ್ತು ಹೊಲಿಗೆ ಯಂತ್ರ ವಿತರಣೆ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ಜೈನ ಧರ್ಮದಲ್ಲಿ ಜನಿಸಿದ್ದರೆ ಮಾತ್ರ ಜೈನರಲ್ಲ. ಬದಲಾಗಿ ಜೈನ ಧರ್ಮದ ತತ್ವದಂತೆ ನಡೆದುಕೊಳ್ಳುವವರು ಕೂಡ ಜೈನರು ಆಗಿದ್ದಾರೆ ಎಂದು ಅಭಿಮತ ವ್ಯಕ್ತಪಡಿಸಿದರು. ದಿಗಂಬರ ಜೈನ ಮಹಾ ಸಮಿತಿ ಕರ್ನಾಟಕ ರಾಜ್ಯಾಧ್ಯಕ್ಷ ಸಂಜಯ ಪಾಟೀಲ ಮಾತನಾಡಿ, ಸಮಾಜದ ಮಕ್ಕಳು ಕೂಡ ಗುಣಮಟ್ಟದ ಮತ್ತು ಉನ್ನತ ಶಿಕ್ಷಣ ಪಡೆದು ಉಜ್ವಲ ಭವಿಷ್ಯ ಕಾಣುವಂತಾಗಲಿ ಎಂಬ ಸದುದ್ದೇಶದಿಂದ ಶಿಷ್ಯ ವೇತನ ಹಾಗೂ ನಿರ್ಗತಿಕ ಕುಟುಂಬದ ಮಹಿಳೆಯರಿಗೆ ಹೊಲಿಗೆ ಯಂತ್ರ ನೀಡಲಾಗುತ್ತಿದೆ ಎಂದು ತಿಳಿಸಿದರು. ದಾನಿಗೊಂಡ ಸಮೂಹ ಶಿಕ್ಷಣ ಸಂಸ್ಥೆ ಚೇರಮನ್ ಡಾ. ಮಹಾವೀರ ದಾನಿಗೊಂಡ, ಜೈನ್ ಸಮಾಜಕ್ಕಾಗಿ ಸಾಕಷ್ಟು ಯೋಜನೆಗಳಿವೆ. ಅವುಗಳನ್ನು ಸರಿಯಾದ ರೀತಿಯಲ್ಲಿ ಸದುಪಯೋಗ ಪಡೆದುಕೊಳ್ಳುವುದು ಅವಶ್ಯಕವಾಗಿದೆ. ಸಮಾಜದ ವತಿಯಿಂದ ಹೊಲಿಗೆ ಯಂತ್ರ ಪಡೆದುಕೊಂಡಿರುವ ಮಹಿಳೆಯರಿಗೆ ತಮ್ಮ ಸಂಸ್ಥೆಯಿಂದ ಉಚಿತವಾಗಿ ತರಬೇತಿ ನೀಡುವ ಭರವಸೆ ನೀಡಿದರು. ಸುನಿತಾ ಆಳಗೊಂಡ ಹಾಗೂ ಡಾ. ನೀಲಿಮಾ ಕಾಗಿ ಶಿಕ್ಷಣ ಸಂಸ್ಕಾರ ಕುರಿತು ಉಪನ್ಯಾಸ ನೀಡಿದರು. ಡಾ. ಪುಷ್ಪದಂತ ದಾನಿಗೊಂಡ, ಪ್ರವೀಣ ನಾಡಗೌಡ, ಡಾ. ಮಧುರಾ ದಾನಿಗೊಂಡ, ಅಜಿತ ದೇಸಾಯಿ, ಜಿನ್ನಪ್ಪ ಸವದತ್ತಿ, ಡಾ. ಶೀತಲ ಕಾಗಿ, ಪ್ರವೀಣ ನಾಶಿ ಇನ್ನಿತರರು ಉಪಸ್ಥಿತರಿದ್ದರು.

# ಧರ್ಮಸ್ಥಳ ಸಂಘವು ಮಹಿಳೆಯರ ಆರ್ಥಿಕ ಅಭಿವೃದ್ಧಿಗೆ ಸಹಕಾರಿ

**ಮಹಾಲಿಂಗಪುರ :** ಗ್ರಾಮೀಣ ಭಾಗದ ಮಹಿಳೆಯರ ಆರ್ಥಿಕ ಅಭಿವೃದ್ಧಿಗೆ ನೆರಳಾಗಿ ನಿಂತಿರುವ ಧರ್ಮಸ್ಥಳ ಸಂಘವು ವಿವಿಧ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸುತ್ತಾ ಆರ್ಥಿಕ, ಸಾಂಸ್ಕೃತಿಕ, ಸಾಮಾಜಿಕ, ಶೈಕ್ಷಣಿಕ ಹಾಗೂ ಔದ್ಯೋಗಿಕ ಕ್ಷೇತ್ರದಲ್ಲಿ ಸಂಘದ ಸದಸ್ಯರು ಅಭಿವೃದ್ಧಿ ಸಾಧಿಸಲೆಂದು ನಿರಂತರ ಪರಿಶ್ರಮಿಸುತ್ತಿದೆ ಎಂದು ಯೋಗ ಶಿಕ್ಷಕ ರಾಘವೇಂದ್ರ ನೀಲನ್ನವರ ಹೇಳಿದರು.

ಸಮೀಪದ ಬಂದಲಕ್ಷ್ಮೀ ದೇವಸ್ಥಾನದ ಆವರಣದಲ್ಲಿ ಜರುಗಿದ ಶಿರೋಳ ವಲಯದ ರನ್ನಬೆಳಗಲಿ ನವಶಕ್ತಿ ಜ್ಞಾನ ವಿಕಾಸ ಕೇಂದ್ರದ




ವಾರ್ಷಿಕೋತ್ಸವ ಕಾರ್ಯಕ್ರಮದಲ್ಲಿ ಅತಿಥಿಗಳಾಗಿ ಭಾಗವಹಿಸಿ ಮಾತನಾಡಿದ ಅವರು, ಆಧುನಿಕತೆಯ ಪ್ರಭಾವಕ್ಕೆ ಒಳಗಾದ ಕುಟುಂಬದ ತಾಯಂದಿರು ವಿದೇಶಿ ಸಂಸ್ಕೃತಿಗೆ ಮಾರುಹೋಗಿ ಅನೇಕ ತೊಂದರೆಗೆ ಬಲಿಯಾಗುತ್ತಿದ್ದಾರೆ. ವಿಶ್ವವೇ ಮೆಚ್ಚುವಂತಹ ಸಂಸ್ಕೃತಿ ನಮ್ಮ ರಾಷ್ಟ್ರದ ಪ್ರತೀಕವಾಗಿದೆ.

ಭಾರತೀಯರಾದ ನಾವು ಭಾರತೀಯರಾಗಿರೋಣ. ನಮ್ಮ ಶ್ರೇಷ್ಠ ಪರಂಪರೆ ಮತ್ತು ಸಂಸ್ಕೃತಿಯನ್ನು ಪಾಲಿಸುತ್ತ ಅದನ್ನು ಮುಂದುವರಿಸೋಣ ಎಂದರು.

ರನ್ನಬೆಳಗಲಿ ಪಟ್ಟಣ ಪಂಚಾಯತಿ ಅಧ್ಯಕ್ಷೆ ರೂಪಾ ಹೊಸಟ್ಟಿ ಕಾರ್ಯಕ್ರಮ ನಿರೂಪಿಸಿದರು. ಸುಜಾತಾ ಮುರನಾಳ ಅಧ್ಯಕ್ಷತೆ ವಹಿಸಿ ಮಾತನಾಡಿದರು.

ವಲಯದ ಮೇಲ್ವಿಚಾರಕರಾದ ಚಂದ್ರಕಲಾ ರೇಶ್ಮಿ ಪ್ರಾಸ್ತಾವಿಕವಾಗಿ ಮಾತನಾಡಿದರು. ಜ್ಞಾನವಿಕಾಸ ಸಮನ್ವಯಾಧಿಕಾರಿ ಸುವರ್ಣ ನಂದಿಕೋಲಮಠ, ತಾಲೂಕಿನ ಟಿ ಎನ್ ಓ ಉಮೇಶ ಲಮಾಣಿ, ಸೇವಾ ಪ್ರತಿನಿಧಿ ಸಾವಿತ್ರಿ ಜೈನಾಪುರ, ಸುಧಾ ಜೈನಾಪುರ ಹಾಗೂ ಸಂಘದ ಸದಸ್ಯರು, ಪಟ್ಟಣದ ಹಿರಿಯರು ಭಾಗವಹಿಸಿದ್ದರು.

# ಮಗಳ ಜನನ ಪತ್ರ ತರಲು ಹೋದ ತಂದೆ ಮರಣ: ಬೈಕ್‌ಗೆ ಕಾರು ಡಿಕ್ಕಿ, ಚಿಕಿತ್ಸೆ ಫಲಿಸದೆ ಬೈಕ್ ಸವಾರ ಸಾವು

**ವರದಿ: ಲಾಲಸಾಬ ಸವಾರಗೋಳ**

**ಕೊಲ್ಹಾರ :** ಕೂಡಗಿ ಎನ್ಟಿಪಿಸಿ ಟೌನ್ಶಿಪ್ ಗೇಟ್ ಮುಂದಿನ ರಾಷ್ಟ್ರೀಯ ಹೆದ್ದಾರಿ–50 ರಲ್ಲಿ ಶುಕ್ರವಾರ ಬೈಕ್ಗೆ ಕಾರು ಡಿಕ್ಕಿ ಹೊಡೆದ ಪರಿಣಾಮ ಬೈಕ್ ಸವಾರ ಮೃತಪಟ್ಟ ಘಟನೆ ನಡೆದಿದೆ, ಕೊಲ್ಹಾರ ತಾಲೂಕಿನ ಮಸೂತಿ ಗ್ರಾಮದ ಗ್ರಾಪಂ ಸದಸ್ಯ ಕಾಶೀಮ ಮಾರುತಿ ಚಲವಾದಿ (ಕಾಳೆ) (55) ಮೃತಪಟ್ಟ ವ್ಯಕ್ತಿ ಎಂದು ತಿಳಿದು ಬಂದಿದೆ.

ಮಗಳ ಜನನ ಪ್ರಮಾಣ ಪತ್ರ ತರಲೆಂದು ಕೂಡಗಿ ಎನ್ ಟಿಪಿಸಿ ಟೌನ್ಶಿಪ್ ಮಾರ್ಗವಾಗಿ ಬಸವನಬಾಗೇವಾಡಿಗೆ ಬೈಕ್ನಲ್ಲಿ ಹೊರಟಿದ್ದಾಗ ರಾಷ್ಟ್ರೀಯ



ಹೆದ್ದಾರಿ–50ನ್ನು ದಾಟುವಾಗ ವಿಜಯಪುರ ಕಡೆಯಿಂದ ವೇಗವಾಗಿ ಬರುತ್ತಿದ್ದ ಬೆಂಗಳೂರು ಮೂಲದ ಇಂಡಿಕಾ ಕಾರೊಂದು ಡಿಕ್ಕಿ ಹೊಡೆದ ಪರಿಣಾಮ ಕಾಶೀಮ ಪ್ರಜ್ಞೆತಪ್ಪಿ ಬಿದ್ದಿದ್ದಾರೆ,ಕೂಡಲೇ ಅವರನ್ನು ಆಂಬುಲೆನ್ಸ್ನಲ್ಲಿ ವಿಜಯಪುರಕ್ಕೆ ಸಾಗಿಸುತ್ತಿದ್ದಾಗ ಮಾರ್ಗಮಧ್ಯೆ ಮೃತಪಟ್ಟಿದ್ದಾರೆ.

ಕೂಡಗಿ ಎನ್ ಟಿಪಿಸಿ ಟೌನ್ಶಿಪ್ನಿಂದ ರಾಷ್ಟ್ರೀಯ ಹೆದ್ದಾರಿ–50ನ್ನು ದಾಟುವ ಸ್ಥಳದಲ್ಲಿ ಯಾವುದೇ ಸೂಚನಾ ಫಲಕವಿಲ್ಲ. ರಸ್ತೆ ವಿಭಜಕವೂ ಇಲ್ಲ. ಹೀಗಾಗಿ ಇಲ್ಲಿ ಆಗಾಗ ರಸ್ತೆ ಅಪಘಾತಗಳು ಸಂಭವಿಸುತ್ತವೆ. ಕೂಡಲೇ ಇಲ್ಲಿ ಸೂಚನಾ ಫಲಕದ ಜತೆಗೆ ರಸ್ತೆ ವಿಭಜಕ ನಿರ್ಮಿಸಬೇಕೆಂದು ಮಸೂತಿ ಗ್ರಾಮಸ್ಥರು ಆಗ್ರಹಿಸಿದ್ದಾರೆ

ಸ್ಥಳಕ್ಕೆ ಕೂಡಗಿ ಎನ್ಟಿಪಿಸಿ ಠಾಣಾ ಪಿಎಸ್ಐ ಯತೀಶ ಕೆ.ಎನ್. ಮತ್ತು ಪೊಲೀಸರ ಆಗಮಿಸಿ ಪರಿಶೀಲನೆ ನಡೆಸಿದರು. ಕೂಡಗಿ ಎನ್ಟಿಪಿಸಿ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

# ಆರೋಗ್ಯಕರ ಜೀವನಶೈಲಿ ಅಳವಡಿಸಿಕೊಳ್ಳಿ: ನಾಗರಾಜ ಬಿಲ್ಗಾರ್

**ಕಾರಟಗಿ** : 'ಸದೃಢ ಆರೋಗ್ಯದಿಂದ ಸದೃಢ ಸಮಾಜ ಹಾಗೂ ಬಲಿಷ್ಠ ದೇಶ ನಿರ್ಮಾಣ ಸಾಧ್ಯ' ಎಂದು ರಾಜ್ಯ ಬಿಜೆಪಿ ಎಸ್‌ಟಿ ಮೋರ್ಚಾ ಮಾಜಿ ಕಾರ್ಯದರ್ಶಿ ನಾಗರಾಜ ಬಿಲ್ಗಾರ್ ಹೇಳಿದರು.

ಪಟ್ಟಣದ ಕೆರೆಬಸವೇಶ್ವರ ಕಲ್ಯಾಣ ಮಂಟಪದಲ್ಲಿ ಭಾನುವಾರ ಬಿಜೆಪಿ ಜಿಲ್ಲಾಧ್ಯಕ್ಷ, ಮಾಜಿ ಶಾಸಕ ಬಸವರಾಜ ದಢೇಸೂಗೂರು ಹಾಗೂ ಬೆಂಗಳೂರಿನ ಸಪ್ತಗಿರಿ ಆಸ್ಪತ್ರೆ ಸಂಯುಕ್ತಾಶ್ರದಲ್ಲಿ ನಡೆದ ಉಚಿತ ಆರೋಗ್ಯ ತಪಾಸಣಾ ಶಿಬಿರಕ್ಕೆ ಚಾಲನೆ ನೀಡಿ ಅವರು ಮಾತನಾಡಿದರು.

ಜನರ ಆರೋಗ್ಯದ ಹಿತದೃಷ್ಟಿಯಿಂದ ಕೇಂದ್ರ ಸರ್ಕಾರ ಆರೋಗ್ಯ ಕ್ಷೇತ್ರದಲ್ಲಿ ಅನೇಕ ಯೋಜನೆಗಳನ್ನು, ರಿಯಾಯಿತಿಯನ್ನು ಜಾರಿಗೊಳಿಸಿದೆ.ಕೋವಿಡ್‌ಸಂದರ್ಭದಲ್ಲೂ ದೇಶವನ್ನು ಸದೃಢ, ಸುರಕ್ಷಿತವಾಗಿ ಮುನ್ನಡೆಸಿದ ಕೇಂದ್ರ ಸರ್ಕಾರ, ಜನರ ರಕ್ಷಣೆಗೆ ಸಮರೋಪಾದಿಯಲ್ಲಿ ಕೆಲಸ



ಮಾಡಿ ಯಶ ಕಂಡಿತ್ತು. ಆಯುಷ್ಮಾನ್ ಭಾರತ್, ಜನೌಷಧಿ ಕೇಂದ್ರ, ವೈದ್ಯಕೀಯ ಶಿಕ್ಷಣದ ಪ್ರಗತಿ, ಸಲಕರಣೆಗಳ ದರದಲ್ಲಿ ಭಾರಿ ರಿಯಾಯಿತಿ ಸೇರಿದಂತೆ ಅನೇಕ ಯೋಜನೆಗಳಡಿ ಆರೋಗ್ಯ ಕ್ಷೇತ್ರದಲ್ಲಿ ಕ್ರಾಂತಿ ಮಾಡಲಾಗಿದೆ. ಬಡ ಹಾಗೂ ಮಧ್ಯಮ ವರ್ಗದವರ ಆರೋಗ್ಯ ಕಾಪಾಡಲು ಅನೇಕ ನೆರವನ್ನು ಕೇಂದ್ರ ಸರ್ಕಾರ ನೀಡುತ್ತಿದೆ' ಎಂದು ಹೇಳಿದರು.

ಬಿಜೆಪಿ ಮಂಡಲ ಅಧ್ಯಕ್ಷ ಮಂಜುನಾಥ ಮಸ್ಕಿ ಮಾತನಾಡಿ, 'ಬೆಂಗಳೂರಿನ ವೈದ್ಯ ಡಾ.ವಿಶ್ವನಾಥರೆಡ್ಡಿ ನೇತೃತ್ವದಲ್ಲಿ 8 ವೈದ್ಯರ ತಂಡದಿಂದ ಹೃದಯ ರೋಗ, ಕ್ಯಾನ್ಸರ್, ಮೂತ್ರಪಿಂಡದಲ್ಲಿಯ ಕಲ್ಲಿನ ಸಮಸ್ಯೆ, ಹೊಟ್ಟೆ ಹುರಿ, ನರರೋಗಗಳಿಗೆ ಸಂಬಂಧಿಸಿ ಸುಮಾರು 600 ಜನರ ಆರೋಗ್ಯ ತಪಾಸಣೆ ಮಾಡಲಾಗುತ್ತಿದೆ. ತಪಾಸಣೆಯಲ್ಲಿ 40 ಜನರಿಗೆ ಶಸ್ತ್ರಚಿಕಿತ್ಸೆಯ ಅಗತ್ಯವಿದ್ದು, ಬೆಂಗಳೂರಿನಲ್ಲಿ ಉಚಿತವಾಗಿ ನಡೆಸಲಾಗುವುದು' ಎಂದರು.

ಮಾಜಿ ಶಾಸಕ, ಬಿಜೆಪಿ ಜಿಲ್ಲಾಧ್ಯಕ್ಷ ಬಸವರಾಜ ದಢೇಸೂಗೂರು, ಪುರಸಭೆ ಸದಸ್ಯರಾದ ಬಸವರಾಜ ಕೊಪ್ಪದ, ಆನಂದ ಎಂ, ಬಿಜೆಪಿ ಜಿಲ್ಲಾ ಪ್ರಧಾನ ಕಾರ್ಯದರ್ಶಿ ರಮೇಶ್ ನಾಡಿಗೇರ, ಯುವ ಮೋರ್ಚಾ ಜಿಲ್ಲಾಧ್ಯಕ್ಷ ಮೌನೇಶ ದಢೇಸೂಗೂರು, ವಾಣಿಜ್ಯೋದ್ಯಮಿ ಕೆ. ನಾಗಪ್ಪ, ಪ್ರಮುಖರಾದ ಉಮೇಶ ಭಂಗಿ, ಬಸವರಾಜ ಎತ್ತಿನಮನಿ, ಬಸವರಾಜ ಶೆಟ್ಟರ್, ರತ್ನಕುಮಾರಿ, ಹೊನ್ನೂರಪ್ಪ ಮಡಿವಾಳರ್, ರೈತ ಮುಖಂಡ ಮರಿಯಪ್ಪ ಸಾಲೋಣಿ ಉಪಸ್ಥಿತರಿದ್ದರು.

# ಯತ್ನಾಳ ನಿಷೇಧಕ್ಕೆ ಎಸ್‌ಪಿಗೆ ಮುಸ್ಲಿಮರ ಮನವಿ

**ಗಂಗಾವತಿ**: ನಗರದಲ್ಲಿ ನಾಲ್ಕು ಗಣೇಶ ಮೂರ್ತಿಗಳ ವಿಸರ್ಜನೆ ಸೆ.16ರಂದು ಅದ್ದೂರಿಯಾಗಿ ನಡೆಯಲಿದ್ದು, ವಿಸರ್ಜನೆ ವೇಳೆ ಯಾವುದೇ ಅಹಿತಕರ ಘಟನೆ ನಡೆಯದಂತೆ ಪೊಲೀಸ್ ಇಲಾಖೆ ನೂರಾರು ಪೊಲೀಸರನ್ನು ಬಂದೋಬಸ್ತ್‌ಗಾಗಿ ನಿಯೋಜಿಸಿದೆ.



21ನೇದಿನದಗಣೇಶಮೂರ್ತಿಯನ್ನು ಹಳೆ ಐಬಿ ಹತ್ತಿರದ ವಿಜಯವೃಂದ ಯುವಕರ ಬಳಗ, ವಾಲ್ಮೀಕಿ ವೃತ್ತದ ಅಖಿಲಕರ್ನಾಟಕವಾಲ್ಮೀಕಿಸಮಾಜ, ಗಾಂಧಿನಗರದ ಗಜಾನನ ಯುವಕ ಮಂಡಳಿ, ಲಿಂಗರಾಜ ಕ್ಯಾಂಪಿನ ವೀರ ಸಾವರ್ಕರ್ ಯುವ ಸೇನಾದವರು ವಿಸರ್ಜನೆ ಮಾಡುತ್ತಿದ್ದು, ಅದ್ದೂರಿ ಮೆರವಣಿಗೆಗೆ ಸಿದ್ದತೆ ನಡೆಸಿಕೊಂಡಿದ್ದಾರೆ.

ಯತ್ನಾಳ ಆಗಮನ ನಿಷೇಧಕ್ಕೆ ಮನವಿ: ನಗರದ ಹಳೆ ಐಬಿ ಹತ್ತಿರದ ವಿಜಯವೃಂದ ಯುವಕರ ಬಳಗದವರು ಆಯೋಜಿಸಿದ ಸಭೆಗೆ ಬರುತ್ತಿರುವ ಬಸವನಗೌಡ ಯತ್ನಾಳ ಪಾಟೀಲ ಅವರನ್ನು ನಗರಕ್ಕೆ ಬರದಂತೆ ನಿಷೇಧಿಸಲು ಮುಸ್ಲಿಂ ಸಮುದಾಯದ ಕೆಲ ಮುಖಂಡರು ಒತ್ತಾಯಿಸಿದ್ದಾರೆ.

ನಗರದ ಡಿವೈಎಸ್ಪಿ ಕಚೇರಿಯಲ್ಲಿ ಎಸ್‌ಪಿ ಎಲ್.ರಾಮ್ ಅರಸಿದ್ಧಿ ಅವರನ್ನ ಭೇಟಿ ಮಾಡಿದ ಮುಸ್ಲಿಂ ಸಮುದಾಯದ ನಿಯೋಗ, 'ಯತ್ನಾಳ್ ವಿವಾದಿತ ಹೇಳಿಕೆಗಳು ನಗರದಲ್ಲಿ ಅಶಾಂತಿ ಸೃಷ್ಟಿಸುವ ಸಾಧ್ಯತೆಗಳಿವೆ. ಹೀಗಾಗಿ ಪ್ರವೇಶಕ್ಕೆ ನಿರ್ಬಂಧ ಹಾಕಿ' ಎಂದು ಮನವಿ ಮಾಡಿದರು.

ಈ ವಿಚಾರಕ್ಕೆ ಎಸ್‌ಪಿ ಪ್ರತಿಕ್ರಿಯೆಸಿ, 'ಯತ್ನಾಳ ಅವರನ್ನ ಆಹ್ವಾನಿಸುತ್ತಿರುವ ಸಂಘಟಕರಿಗೆ ಸೂಚನೆಗಳ ಜೊತೆಗೆ, ಷರತ್ತುಗಳನ್ನು ವಿಧಿಸಲಾಗಿದೆ. ಅವರು ವಿವಾದಿತ ಹೇಳಿಕೆ ನೀಡಿದರೆ ಪೊಲೀಸರು ಸ್ವಯಂ ಪ್ರಕರಣ ದಾಖಲಿಸಿಕೊಳ್ಳಲಿದ್ದಾರೆ. ಪ್ರತಿಯೊಂದನ್ನೂ ಸೂಕ್ಷ್ಮವಾಗಿ ಅವಲೋಕಿಸಲಾಗುತ್ತಿದ್ದು, ಗೊಂದಲಕ್ಕೆ ಅವಕಾಶ ನೀಡಬೇಡಿ' ಎಂದರು.

ಮುಖಂಡರಾದ ಅಲ್ತಾಫ್ ಹುಸೇನ್ ಬಿಚ್ಚುಕತ್ತಿ, ಸಲೀಂಭಾಗವಾನ್, ಸಲೀಂ ಮನಿಯಾರ್ ಇತರರು ಹಾಜರಿದ್ದರು.

# ಮತದಾನ ಮಾಡಿದರೆ ಸಂವಿಧಾನಕ್ಕೆ ಗೌರವ: ಶಿವರಾಜ ಎಸ್. ತಂಗಡಗಿ

**ಕೊಪ್ಪಳ** : 'ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಮತದಾನಕ್ಕೆ ಅತ್ಯಂತ ಮಹತ್ವವಿದ್ದು, ಪ್ರತಿಯೊಬ್ಬರೂ ಹೆಚ್ಚಿನ ಪ್ರಮಾಣದಲ್ಲಿ ಮತದಾನ ಮಾಡಿದಾಗ ನಾವು ಭಾರತ ಸಂವಿಧಾನಕ್ಕೆ ಗೌರವ ಕೊಟ್ಟಂತಾಗುತ್ತದೆ' ಎಂದು ಜಿಲ್ಲಾ ಉಸ್ತುವಾರಿ ಸಚಿವ ಶಿವರಾಜ ಎಸ್. ತಂಗಡಗಿ ಹೇಳಿದರು.

ಸೋಮವಾರ ಜಿಲ್ಲಾಡಳಿತ ಭವನದಲ್ಲಿ ಜಿಲ್ಲಾಡಳಿತ, ಜಿಲ್ಲಾ ಪಂಚಾಯಿತಿ ಹಾಗೂ ಸಮಾಜ ಕಲ್ಯಾಣ ಇಲಾಖೆ ವತಿಯಿಂದ ನಡೆದ ಅಂತರರಾಷ್ಟ್ರೀಯ ಪ್ರಜಾಪ್ರಭುತ್ವ ದಿನದ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಅವರು 'ಪ್ರತಿ ವರ್ಷ ಒಂದೊಂದು ಶೀರ್ಷಿಕೆಯಲ್ಲಿ ಕಾರ್ಯಕ್ರಮ ಆಯೋಜನೆ ಮಾಡಲಾಗುತ್ತಿದೆ.

ಈ ವರ್ಷ ನನ್ನ ಮತ ನನ್ನ ಹಕ್ಕು' ಎಂಬ ಘೋಷವಾಕ್ಯದೊಂದಿಗೆ ಆಚರಿಸಲಾಗುತ್ತಿದ್ದು, ಬಿ.ಆರ್. ಅಂಬೇಡ್ಕರ್ ಅವರು ಮತದಾನಕ್ಕೆ ದೊಡ್ಡ ಶಕ್ತಿ ನೀಡಿದ್ದಾರೆ. ನಮ್ಮ ದೇಶದಲ್ಲಿ ರಾಜ, ಮಹಾರಾಜರ ಕಾಲದಲ್ಲಿ ಕೆಲವರಿಗೆ ಮಾತ್ರ ಮತದಾನದ ವ್ಯವಸ್ಥೆಯಿತ್ತು' ಎಂದರು.

ರಾ.ಬ.ಕೊ.ವಿ ಹಾಲು ಉತ್ಪಾದಕರ ಸಂಘಗಳ ಒಕ್ಕೂಟದ ಅಧ್ಯಕ್ಷ ಕೆ.ರಾಘವೇಂದ್ರ ಹಿಟ್ನಾಳ ಅವರು ಮಾತನಾಡಿ ಪ್ರಜಾಪ್ರಭುತ್ವ ಈ ದೇಶದಲ್ಲಿ ಪ್ರತಿಯೊಬ್ಬ ನಾಗರಿಕನಿಗೆ ಸಿಕ್ಕಿರುವ ಅಧಿಕಾರ. ಬಿ.ಆರ್ ಅಂಬೇಡ್ಕರ್



ಅವರು ರಚಿಸಿರುವ ಸಂವಿಧಾನ ದೇಶಕ್ಕೆ ಕೊಟ್ಟಿರುವ ಮಹತ್ವದ ಕೊಡುಗೆಯಾಗಿದೆ' ಎಂದು ಸ್ಮರಿಸಿದರು.

ವಿಧಾನ ಪರಿಷತ್ ಸದಸ್ಯೆ ಹೇಮಲತಾ ನಾಯಕ ಅವರು ಮಾತನಾಡಿ 'ಭಾರತವು ಬಹುದೊಡ್ಡ ಪ್ರಜಾಪ್ರಭುತ್ವ ರಾಷ್ಟ್ರವಾಗಿದ್ದು, ಜನರಿಂದ ಜನರಿಗಾಗಿ ಜನರೇ ನಡೆಸುವ ಸರ್ಕಾರವಾಗಿದೆ.

ಈ ಸಂದರ್ಭದಲ್ಲಿ ನಮ್ಮ ಸ್ವಾತಂತ್ರ್ಯ ಹೋರಾಟಗಾರರನ್ನು ಸ್ಮರಿಸಬೇಕಿದೆ. ಅಂಬೇಡ್ಕರ್ ಸಂವಿಧಾನದ ಆಶಯವನ್ನು ನಾವೆಲ್ಲರೂ ಪಾಲನೆ ಮಾಡಬೇಕಿದೆ' ಎಂದು ಹೇಳಿದರು.

ಜಿಲ್ಲಾಧಿಕಾರಿ ಸುರೇಶ ಬಿ. ಇಟ್ನಾಳ, ಜಿಲ್ಲಾ ಪಂಚಾಯಿತ ಸಿಇಒ ವರ್ಣಿತ್ ನೇಗಿ, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಡಾ. ರಾಮ್ ಎಲ್. ಅರಸಿದ್ದಿ, ಉಪ ಅರಣ್ಯ ಸಂರಕ್ಷಣಾಧಿಕಾರಿ ನಿರ್ಮಲಾ, ಹೆಚ್ಚುವರಿ ಜಿಲ್ಲಾಧಿಕಾರಿ ಸಿದ್ರಾಮೇಶ್ವರ, ಸಮಾಜ ಕಲ್ಯಾಣ ಇಲಾಖೆಯ ಉಪನಿರ್ದೇಶಕ ಅಜ್ಜಪ್ಪ ಸೊಗಲದ,

ಜಿಲ್ಲಾ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಪ್ರಾಧಿಕಾರದ ಅಧ್ಯಕ್ಷ ರೆಡ್ಡಿ ಶ್ರೀನಿವಾಸ, ಸಹಾಯಕ ಆಯುಕ್ತ ಕ್ಯಾಪ್ಟನ್ ಮಹೇಶ ಮಾಲಗಿತ್ತಿ ಹಾಗೂ ವಿವಿಧ ಶಾಲಾ ಕಾಲೇಜುಗಳ ವಿದ್ಯಾರ್ಥಿಗಳು ಪಾಲ್ಗೊಂಡಿದ್ದರು.

# ನೆಟ್‌ಬಾಲ್: ಕೊಪ್ಪಳಕ್ಕೆ ಎರಡು ಪ್ರಶಸ್ತಿ



**ಕೊಪ್ಪಳ** : ದಸರಾ ಅಂಗವಾಗಿ ಇಲ್ಲಿನ ಜಿಲ್ಲಾ ಕ್ರೀಡಾಂಗಣದಲ್ಲಿ ಸೋಮವಾರ ನಡೆದ ಕಲಬುರಗಿ ವಿಭಾಗ ಮಟ್ಟದ ಕ್ರೀಡಾಕೂಟದ ನೆಟ್‌ಬಾಲ್‌ನಲ್ಲಿ ಪುರುಷರ ತಂಡ ಚಾಂಪಿಯನ್ ಆದರೆ, ಮಹಿಳಾ ತಂಡ ಒಂದೂ ಪಂದ್ಯವಾಡದೆ ರಾಜ್ಯಮಟ್ಟದಲ್ಲಿ ಸ್ಪರ್ಧಿಸುವ ಅವಕಾಶ ಪಡೆದುಕೊಂಡಿತು.

ಕಲಬುರಗಿ ವಿಭಾಗದ ಏಳು ಜಿಲ್ಲೆಗಳ ತಂಡಗಳು ಟೂರ್ನಿಯಲ್ಲಿ ಪಾಲ್ಗೊಳ್ಳಬೇಕಿತ್ತು. ಆದರೆ ಪುರುಷರ ನೆಟ್‌ಬಾಲ್‌ನಲ್ಲಿ ಮೂರು ತಂಡಗಳಷ್ಟೇ ಭಾಗವಹಿಸಿದ್ದವು. ಕೊಪ್ಪಳದ ತಂಡ ಫೈನಲ್‌ನಲ್ಲಿ ಬಳ್ಳಾರಿ ತಂಡವನ್ನು ಮಣಿಸಿದರೆ, ಮಹಿಳಾ ವಿಭಾಗದ ಏಕೈಕ ತಂಡವಾಗಿದ್ದ ಕೊಪ್ಪಳ ಸರಾಗವಾಗಿ ಅರಮನೆಯ

ನಗರಿ'ಯ ಪ್ರವೇಶ ಸುಲಭ ಮಾಡಿಕೊಂಡಿತು. ಮಹಿಳಾ ತಂಡದಲ್ಲಿ ಇರುವವರು ಚೈತನ್ಯ ಸಮೂಹದ ಸ್ವಾಮಿ ವಿವೇಕಾನಂದ ಪದವಿಪೂರ್ವ ಕಾಲೇಜಿನ ವಿದ್ಯಾರ್ಥಿಗಳು.

ಕುಸ್ತಿ: ಪುರುಷರ 57 ಕೆ.ಜಿ. ಫ್ರೀ ಸ್ಟೈಲ್ ಕುಸ್ತಿ ಸ್ಪರ್ಧೆಯಲ್ಲಿ ಕಲಬುರಗಿಯ ಅಮೃತ್, 65 ಕೆ.ಜಿ.ಯಲ್ಲಿ ವಿಜಯನಗರ ಜಿಲ್ಲೆಯ ಪರಶುರಾಮ ಎನ್., 70 ಕೆ.ಜಿ.ಯಲ್ಲಿ ಯಾದಗಿರಿ ಜಿಲ್ಲೆಯ ನಿಂಗಪ್ಪ, 74 ಕೆ.ಜಿ.ಯಲ್ಲಿ ಯಾದಗಿರಿಯ ಬಸವರಾಜ, 92 ಕೆ.ಜಿ. ಮೇಲಿನ ವಿಭಾಗದಲ್ಲಿ ಕೊಪ್ಪಳ ಜಿಲ್ಲೆಯ ಹುಲಗಪ್ಪ ಮೊದಲಿಗರಾದರು. ಮಹಿಳೆಯರ 55 ಕೆ.ಜಿ. ವಿಭಾಗದಲ್ಲಿ ವಿಜಯಲಕ್ಷ್ಮಿ, 57 ಕೆ.ಜಿ.ಯಲ್ಲಿ ಅಶ್ವಿನಿ ಚಾಂಪಿಯನ್ ಆದರು.

ಟೇಕ್ವಾಂಡೊ: ಪುರುಷರ ಟೇಕ್ವಾಂಡೊ ಸ್ಪರ್ಧೆಯ ಕೊಪ್ಪಳ ಜಿಲ್ಲೆಯ ಹರ್ಷವರ್ಧನ (45 ಕೆ.ಜಿ. ವಿಭಾಗ), ಕಿರಣ ಎಸ್. ಬೆಟಗೇರಿ (50 ಕೆ.ಜಿ.), ಅಜಯಕುಮಾರ (62 ಕೆ.ಜಿ.), ಮಣಿಕಂಠ ಸಿ.ಎಂ. (85 ಕೆ.ಜಿ.), ಮಹಿಳೆಯರ ವಿಭಾಗದಲ್ಲಿ ಅನುಷಾ (42 ಕೆ.ಜಿ.), ದುರಗವ್ವ (70 ಕೆ.ಜಿ.) ಮತ್ತು ಮಹಾಲಕ್ಷ್ಮೀ (70 ಕೆ.ಜಿ. ಮೇಲ್ಪಟ್ಟು) ಪ್ರಥಮ ಸ್ಥಾನ ಪಡೆದು ರಾಜ್ಯಮಟ್ಟಕ್ಕೆ ಆಯ್ಕೆಯಾದರು.

# ಶಿವಶರಣ ಶಂಕರ ದಾಸಿಮಯ್ಯನವರು

ಕನ್ನಡ ಸಾಹಿತ್ಯಕ್ಕೆ ಸುಮಾರು 1500 ವರ್ಷಗಳ ಇತಿಹಾಸವಿದೆ ಈ ಸಾಹಿತ್ಯದಲ್ಲಿ ಅನೇಕ ಪ್ರಮುಖವಾದಂತಹ ಘಟ್ಟಗಳನ್ನು ನೋಡಬಹುದುಅವುಗಳಲ್ಲೇಅತೀಪ್ರಾಮುಖ್ಯತೆ ಪಡೆದಂತಹ ಸಾಹಿತ್ಯ ಎಂದರೆ **ವಚನ ಸಾಹಿತ್ಯ **ಎಂದು ಹೇಳಬಹುದಾಗಿದೆ ಇದನ್ನು ಕನ್ನಡ ಸಾಹಿತ್ಯ ಕೀರ್ತಿ ಶಿಖರದ ಕಾಲ ಎಂದು ಪರಿಗಣಿಸಲಾಗಿದೆ12ನೇಶತಮಾನದಲ್ಲಿಅನೇಕ ಜನ ಶರಣ ಶರಣೆಯರು ಕನ್ನಡ ಸಾಹಿತ್ಯಕ್ಕೆ ವಚನಗಳನ್ನು ಕೊಡುಗೆಯಾಗಿ ಕೊಟ್ಟಿದ್ದಾರೆ.. ಬಸವಣ್ಣನವರು. ಅಕ್ಕಮಹಾದೇವಿ. ಅಲ್ಲಮಪ್ರಭುಗಳು. ಚನ್ನಬಸವಣ್ಣನವರು. ಅಕ್ಕನಾಗಮ್ಮ. ಇನ್ನು ಮುಂತಾದವರಿದ್ದಾರೆ ಇವರಲ್ಲಿ ಶಂಕರ ದಾಸಿಮಯ್ಯನವರು ಒಬ್ಬರು..

ಶಂಕರ ದಾಸಿಮಯ್ಯ ನವರ ಪರಿಚಯ

ಇವರು ಮೂಲತಃ ಬಾಗಲಕೋಟೆ ಜಿಲ್ಲೆಯ ಹುನಗುಂದ ತಾಲೂಕಿನ (ಸ್ಕಂದ ಶಿಲೆ ) ಕಂದಗಲ್ಲಿನವರು

ಮೂಲತಃ ಶೈವ ಬ್ರಾಹ್ಮಣರಾಗಿದ್ದು

ನಂತರ ನವಿಲೇ ಶಂಕರಲಿಂಗನ ಕೃಪೆಯಿಂದ ಲಿಂಗಾಯತ ಧರ್ಮ ಪಾಲಿಸಿದವರೆಂದು ಶಂಕರ ದಾಸಿಮಯ್ಯನ ರಗಳೆ ಮತ್ತು ಬಸವ ಪುರಾಣ ಗಳಲ್ಲಿ ಕಾಣಬಹುದು ಶಿವನಿಂದ್ ಹಣೆಗಣ್ಣಿನ ಆಶೀರ್ವಾದ ಪಡೆದವರು ಎಂದು ಐತಿಹ್ಯವಿದೆ ಶಿವದಾಸಿ ಇವರ ಧರ್ಮ ಪತ್ನಿ. ಶಿವದಾಸಿಮಯ್ಯ ಇವರ ಸಹೋದರ

ಇವರ ಕಾಯಕ ಜುಲಿಗ್ (ನೆಯುವದು )ಮತ್ತು ಬಣ್ಣಗಾರಿಕೆ ಇವರ ವೃತ್ತಿ.

* ಲಿಂಗಾಯತ ಧರ್ಮದ ಕಾಯಕ ತತ್ವವನ್ನು ಎತ್ತಿಹಿಡಿದವರು
* ಜಡೆ ಶಂಕರಲಿಂಗ್ ತನ್ನ ಆರಾಧ್ಯ ದೈವ ಎಂದು ಹೇಳಿಕೊಂಡಿದ್ದಾರೆ
* ಇವರು ತಮ್ಮ ಧ್ಯಾನದ ಬಲದಿಂದ ಶಿವನ ಹಣೆಗಣ್ಣನ್ನು ಆಶೀರ್ವಾದ ರೂಪದಲ್ಲಿ ಪಡೆದುಕೊಳ್ಳುತ್ತಾರೆ ಎಂದು ಹರಿಹರನು ತನ್ನ ರಗಳೆಯಲ್ಲಿ ಹೇಳಿದ್ದಾನೆ.
* ಅನುಭವ ಮಂಟಪದಲ್ಲಿ ತಮ್ಮದೇ ಆದಂತಹ ವಚಗಳನ್ನು ಸ್ಪಷ್ಟವಾಗಿ ಹೇಳಿದಂತಹವರು
* ಬಹಳ ವಚನಗಳು ಸಿಗುವದಿಲ್ಲ

ದೊರೆತ ವಚಗಳಲ್ಲಿ ಶರಣರನ್ನು ಸ್ಮರಿಸಿಕೊಳ್ಳುವ ಕಾರ್ಯ ಮಾಡಿದ್ದಾರೆ

**ಶಂಕರ ದಾಸಿಮಯ್ಯನವರ ವಚನಗಳು **

ಎನ್ನ ಕಾಯಕ್ಕೆ ಗುರುವಾದನಯ್ಯ ಬಸವಣ್ಣನು
ಎನ್ನ ಜೀವಕ್ಕೆ ಲಿಂಗಾವಾದನಯ್ಯ ಚನ್ನಬಸವಣ್ಣನು
ಎನ್ನ ಪ್ರಾಣಕ್ಕೆ ಪ್ರಸಾದವಾದನಯ್ಯ ಮರುಳ ಶಂಕರ ದೇವರು
ಎನ್ನ ಜ್ಞಾನಕ್ಕೆ ಜಂಗಮವಾದನಯ್ಯ ಪ್ರಭುದೇವರು ಇಂತಿವರ ಕರುಣದಿಂದಾನು ಬದುಕಿದೆನಯ್ಯ ನಿಜಗುರು ಶಂಕರದೇವ
ಹರನ ನಿರೂಪದಿಂದ ಧರೆಗೆ ಬಸವಣ್ಣನವತ-ರಿಸಿದ ಕಾರಣ,
ಶಿವಾಚಾರ ಸದಾಚಾರವೆಂಬುದು ಧರೆಗೆ



ವಿಖ್ಯಾತವಾಯಿತ್ತು.
ಶಿವಗಣ ಪ್ರಮಥಗಣಂಗಳೆಂಬ ಮಹಾಮಹಿಮರ ಸುಳುಹು,
ಧರೆಯ ಮೇಲೆ ಕಾಣಬಂದಿತ್ತು ನೋಡಯ್ಯಾ.
ಪರುಷವ ಸಾಧಿಸಿದಂತಾಯಿತ್ತು, ನಿಮ್ಮ ಶರಣರ ಸಂಗದಿಂದ.
ಎನ್ನ ನಂದಿಯ ಮೊಗವಾಡ, ನೊಸಲಕಣ್ಣುಂಟೆಂಬ
ಅಹಂಕಾರವ ಮುಂದುಗೊಂಡಿದ್ದೆನಯ್ಯಾ.
ಎನ್ನ ಮದ ಉಡುಗಿ, ಸಂಗನಬಸವಣ್ಣನ ಕರುಣದಿಂದ
ಪ್ರಭುದೇವರೆಂಬ ನಿರಾಳವ ಕಂಡು ಬದುಕಿದೆನು ಕಾಣಾ,
ನಿಜಗುರು ಶಂಕರದೇವಾ...
ಹೀಗೆ ನಾಲ್ಕು ಜನ ಶರಣರನ್ನು ತಮ್ಮ ವಚನಗಳಲ್ಲಿ ಸ್ಮರಿಸಿದ್ದಾರೆ
ಎರಳೆ ಯತಿಯಂತೆ, ಕಾಕ ಪಿಕದಂತಿರಬೇಡವೆ ?
ತಿಟ್ಟನೆ ತಿರುಗಿ, ತೊಟ್ಟನೆ ತೊಳಲಿ ಬಳಲುವರ ಕಳ ಹೇಸಿಕೆಯ ನೋಡಾ!
ಇರುಳು ಹಗಲೆನ್ನದೆ ತಿರುಗುವವರ ಕಂಡು ಹೇಸಿದೆ.
ಅರಿದಡೆ ಶರಣ, ಮರೆದಡೆ ಮಾನವ.
ಸತ್ತ ಕಸನ ಹೊತ್ತುಕೊಂಡು ಊರೂರಿಗೆ ಮಾರುವ
ಕಾಶಾಂಬರಧಾರಿಗಳನೊಲ್ಲ, ನಿಜಗುರು ಶಂಕರದೇವ.
ಕಾಯವಿಲ್ಲಾಗಿ ಮಾಯವಿಲ್ಲ, ಮಾಯವಿಲ್ಲಾಗಿ ಮಥನವಿಲ್ಲ,
ಮಥನವಿಲ್ಲಾಗಿ ಭಾವವಿಲ್ಲ,ರಿ ಭಾವವಿಲ್ಲಾಗಿ ಬಯಕೆಯಿಲ್ಲ,
ಬಯಕೆಯಿಲ್ಲಾಗಿ ನಿರ್ಭಾವ ನಿಜವನೈದಿ,
ನಿಜಗುರು ಶಂಕರದೇವರೆಂಬುದು ತಾನಿಲ್ಲ.

ಬಣಗಾರರು ಎಲ್ಲಿರುತ್ತಾರೋ ಅಲ್ಲಿ ಶಂಕರಲಿಂಗನ ದೇವಸ್ಥಾನ ಕಾಣಬಹುದಾಗಿದೆ ಆದಿಕಾಲದಿಂದಲೂ ನೇಕಾರಿಕೆಗೆ ಹೆಸರುವಾಸಿಯಾದ ಇಲಕಲ್ಲ ಅಲ್ಲಿ ಮತ್ತು ಕಂದಗಲ್ ಅಲ್ಲಿ. ಗೋಕಾಕ್. ಹುಬ್ಬಳ್ಳಿ. ವಿಜಯಪುರ. ಗದಗ ಬಸವೇಶ್ವರ ನಗರದಲ್ಲಿ ಶಂಕರ ಲಿಂಗನ ದೇವಸ್ಥಾನ ಕಾಣಬಹುದಾಗಿದೆ ಎಂದರೆ ಇದಕ್ಕೆ ಪ್ರಮುಖ ಕಾರಣ ದಾಸಿಮಯ್ಯನವರು ಆದ್ದರಿಂದಲೇ ಇವರನ್ನು **ಬಣಗಾರ ಸಮಾಜದ ಗುರುಗಳೆಂದು ಪೂಜಿಸುತ್ತೇವೆ **

ಈಗಲೂ ಸಹ ಶ್ರಾವಣ ಮಾಸದಲ್ಲಿ ನವಿಲೇ ಜಡೆಶಂಕರ ಲಿಂಗನಿಗೆ ಪಾದಯಾತ್ರೆ ಹೊರಡುವದರ ಮೂಲಕ ಭಕ್ತರು ತಮ್ಮ ಭಕ್ತಿ ಮತ್ತು ಅಭಿಮಾ ವನ್ನು ವ್ಯಕ್ತಪಡಿಸುತ್ತಾರೆ

ಇಂತಹ ಶರಣರ ಜೀವನ ಚರಿತ್ರೆಯನ್ನು ಪಠ್ಯದಲ್ಲಿ ಅಳವಡಿಸಿದರೆ ಕಥೆಗಳ ರೂಪದಲ್ಲಿ ಹೇಳಿದರೆ ಪರಿಣಾಮಕಾರಿಯಾದಂತಹ ಪರಿವರ್ತನೆ ತರಲು ಸಾಧ್ಯವಾಗುತ್ತದೆ ಎಂಬುದು ನನ್ನ ಅನಿಸಿಕೆ.

* * *

**ಎಲ್ಲರಿಗೂ ಶರಣು**
**ಶರಣಾರ್ಥಿ**



# ರೇಬಿಸ್ ಜಾಗ್ರತಿ ಕಾರ್ಯಕ್ರಮ

**ಜಮಖಂಡಿ** : ಸರಕಾರಿ ಪ್ರಥಮ ದರ್ಜೆ ಮಹಿಳಾ ಕಾಲೇಜು ಹಾಗೂ ಸ್ನಾತಕೋತ್ತರ ಕೇಂದ್ರ ಜಮಖಂಡಿಯಲ್ಲಿ ಸಪ್ಟೆಂಬರ್ 16 ರಂದು ರೆಡ್ಕ್ರಾಸ್ ಘಟಕ, ಎನ್.ಎಸ್.ಎಸ್. ಘಟಕ, ಐ.ಕ್ಯೂ.ಎ.ಸಿ ಹಾಗೂ ಪಶು ವೈದ್ಯಕೀಯ ಆಸ್ಪತ್ರೆ ಇವರ ಸಹಯೋಗದೊಂದಿಗೆ ರೇಬೀಸ್: ಜಾಗೃತಿ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿ-ತ್ತು.

ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಗಳಾಗಿ ಜಮಖಂಡಿಯ ಪಶು ವೈದ್ಯಾಧಿಕಾರಿಗಳಾದ ಡಾ. ಪ್ರಕಾಶ ಗೂಳಪ್ಪಗೋಳ ಅವರು ಆಗಮಿಸಿದ್ದರು. ಅವರು ವಿದ್ಯಾರ್ಥಿನಿಯರನ್ನು ಕುರಿತು ಮಾತನಾಡುತ್ತ "ರೇಬಿಸ್ ಅಂದರೆ ಸಾಮಾನ್ಯವಾಗಿ"ಹುಚ್ಚುನಾಯಿರೋಗ"ಎಂದು ಕರೆಯಲ್ಪಡುವ ಒಂದು ಅತ್ಯಂತ ಅಪಾಯಕಾರಿ ಹಾಗೂ ಮಾರಣಾಂತಿಕ ರೋಗ. ಈ ರೋಗವು ವೈರಸ್ನಿಂದ ಉಂಟಾಗುತ್ತದೆ. ಮುಖ್ಯವಾಗಿ ಸೋಂಕಿತ ನಾಯಿಗಳ ಕಡಿತದಿಂದ, ಅಂ-ದರೆ ಅದರ ಜೊಲ್ಲಿನಿಂದ, ಮನುಷ್ಯ-ರಿಗೆ ಹರಡುತ್ತದೆ. ಕೇವಲ ನಾಯಿಗಳಿಂದ ಮಾತ್ರವಲ್ಲದೆ, ಬೆಕ್ಕು, ಕಾಡು ಪ್ರಾಣಿ, ಕೋತಿ ಮುಂತಾದವುಗಳಿಂದಲೂ ಈ ವೈರಸ್ ಹಬ್ಬುವ ಸಾಧ್ಯತೆ ಇದೆ. ರೇಬಿಸ್ ಸೋಂಕು ತಗುಲಿದ ನಂತರ ಮೊದಲಿಗೆ ಗಾಯವಾದ ಜಾಗದಲ್ಲಿ ಸುಡೋಣಿಕೆ, ನೋವು, ಚುರುಕು ಕಾಣಿಸಿಕೊಳ್ಳುತ್ತದೆ. ನಂತರ ತಲೆನೋವು, ನೀರನ್ನು ನೋಡಿದಾಗ ಭಯ, ನರ ಸಂಬಂಧಿ ತೊಂದರೆಗಳು ಕಂಡು ಬರುತ್ತವೆ. ಸೋಂಕು ಒಂದು ಬಾರಿ ತೀವ್ರವಾಗಿ ಕಾಣಿಸಿಕೊಂಡರೆ, ಅದಕ್ಕೆ ಚಿಕಿತ್ಸೆ ಸಾಧ್ಯವಿಲ್ಲ. ಆದ್ದರಿಂದ ಇದನ್ನು "ಮಾರಣಾಂತಿಕ ರೋಗ" ಎಂದು ಕರೆಯುತ್ತಾರೆ. ಈ ರೋಗದಿಂದ ತಪ್ಪಿಸಿಕೊಳ್ಳಲು ಕೆಲವು ಮುನ್ನೆಚ್ಚರಿಕೆ ಕ್ರಮಗಳು ಬಹಳ ಅಗತ್ಯ. ಮೊದಲನೆಯದಾಗಿ, ಮನೆಗಳಲ್ಲಿ ಸಾಕುವ ನಾಯಿಗಳಿಗೆ ನಿಯಮಿತವಾಗಿ ರೇಬಿಸ್ ಲಸಿಕೆ ಹಾಕಿಸಬೇಕು. ಯಾರಾದರೂ ನಾಯಿ ಅಥವಾ ಬೇರೆ ಪ್ರಾಣಿ ಕಚ್ಚಿದಲ್ಲಿ ತಕ್ಷಣವೇ ಗಾಯವನ್ನು ಸಾಬೂನು ಮತ್ತು ಶುದ್ಧ ನೀರಿನಿಂದ ಚೆನ್ನಾಗಿ ತೊಳೆಯಬೇಕು. ನಂತರ ತಕ್ಷಣವೇ ಸಮೀಪದ ಆಸ್ಪತ್ರೆಯಲ್ಲಿ ವೈದ್ಯಕೀಯ ಸಲಹೆ ಪಡೆದು, ಅಗತ್ಯವಾದರೆ ರೇಬಿಸ್ ಲಸಿಕೆಗಳನ್ನು



ತೆಗೆದುಕೊಳ್ಳುವುದು ಬಹಳ ಅವಶ್ಯಕ. ಇಂದು ಭಾರತ ಸೇರಿದಂತೆ ಅನೇಕ ದೇಶಗಳಲ್ಲಿ ರೇಬಿಸ್ ಬಗ್ಗೆ ಜಾಗೃತಿ ಮೂಡಿಸಲು ವಿಶೇಷ ಕಾರ್ಯಕ್ರಮಗಳನ್ನು ನಡೆಸಲಾಗುತ್ತಿದೆ. ಗ್ರಾಮ-ನಗರಗಳಲ್ಲಿಯೂ ವೈದ್ಯಕೀಯ ಸಿಬ್ಬಂದಿ, ಪಶು ವೈದ್ಯರು ಹಾಗೂ ಸ್ವಯಂ ಸೇವಾ ಸಂಘಟನೆಗಳು ಲಸಿಕೆ ಕಾರ್ಯಕ್ರಮ, ಜಾಗೃತಿ ಶಿಬಿರಗಳನ್ನು ನಡೆಸುತ್ತಿದ್ದಾರೆ. ಪ್ರತಿಯೊಬ್ಬರೂ ಜಾಗರೂಕರಾಗಿ ನಡೆದುಕೊಂಡರೆ, ಈ ಮಾರಣಾಂತಿಕ ರೋಗವನ್ನು ತಡೆ ಹಿಡಿಯುವುದು ಸಾಧ್ಯ. ಹೀಗಾಗಿ, ರೇಬಿಸ್ ತಡೆಗಟ್ಟುವ ಮಾರ್ಗವೆಂದರೆ ಮುನ್ನೆಚ್ಚರಿಕೆ. ಸಮಯಕ್ಕೆ ಸರಿಯಾದ ಲಸಿಕೆ, ಸ್ವಚ್ಛತೆ ಹಾಗೂ ಜಾಗೃತಿ ಮೂಲಕ ನಾವು ನಮ್ಮನ್ನು ಮತ್ತು ಸಮಾಜವನ್ನು ಈ ಅಪಾಯಕರ ರೋಗದಿಂದ ರಕ್ಷಿಸಬಹುದು ಎಂದು ಹೇಳಿದರು.

ಕಾರ್ಯಕ್ರಮದ ಅಧ್ಯಕ್ಷತೆಯನ್ನು ವಹಿಸಿದ್ದ ಮಹಾವಿದ್ಯಾಲಯದ ಪ್ರಾಂಶುಪಾಲೆ ಡಾ. ಸುನಂದಾ ಎಸ್. ಶಿರೂರ ಅವರು ಮಾತನಾಡುತ್ತಾ, "ರೇಬೀಸ್ ಎಂಬ ಕಾಯಿಲೆ ಕೇವಲ ಒಂದು ವೈದ್ಯಕೀಯ ವಿಷಯವಲ್ಲ, ಅದು ಜೀವನ್ಮರಣದ ಪ್ರಶ್ನೆಯಾಗಿದೆ. ಸಮಾಜದಲ್ಲಿ ಬಹಳಷ್ಟು ಜನರು ಈ ರೋಗದ ಬಗ್ಗೆ ಸರಿಯಾದ ಅರಿವು ಹೊಂದಿಲ್ಲ. ಯಾರಾದರೂ ಪ್ರಾಣಿಯೊಂದು ಕಚ್ಚಿದಾಗ ಅದು ಕೇವಲ ಸಾಮಾನ್ಯ ಗಾಯವೆಂದು ಭಾವಿಸಿ ನಿರ್ಲಕ್ಷ್ಯ ಮಾಡುವರು. ಆದರೆ ಸಣ್ಣ ಗಾಯವೆಂದು ನಿಲ9ಕ್ಷಿಸಿದ್ದೆ ಮುಂದೆ ಜೀವಕ್ಕೆ ಅಪಾಯ ತರುವುದು. ಒಂದು ನಿರ್ಲಕ್ಷ್ಯ, ಒಂದು ವಿಳಂಬ ಅನೇಕ ಕುಟುಂಬಗಳನ್ನು ದುಃಖದಲ್ಲಿ ಮುಳುಗಿಸುತ್ತದೆ. ಆದ್ದ-ರಿಂದ ನಾವೆಲ್ಲ ಯಾವಾಗಲೂ ಎಚ್ಚ-ರಿಕೆಯಿಂದಿರಬೇಕು. ಜಾಗೃತಿಯಿಂದ ವರ್ತಿಸಬೇಕು. ಆರೋಗ್ಯವೇ ನಮ್ಮ ಆಸ್ತಿ. ಅದನ್ನು ಕಾಪಾಡುವುದು ಪ್ರತಿಯೊಬ್ಬರ ಜವಾಬ್ದಾರಿ. ವಿದ್ಯಾರ್ಥಿಗಳು ನಾಳೆಯ ಶಕ್ತಿ. ನಾಳೆಯ ಸಮಾಜವನ್ನು ಕಟ್ಟುವವರು. ನಿಮ್ಮ ಮನೆಯವರಲ್ಲಿ, ನಿಮ್ಮ ಸ್ನೇಹಿತರಲ್ಲಿ, ನಿಮ್ಮ ಗ್ರಾಮದ ಜನರಲ್ಲಿ ಈ ರೋಗದ ಬಗ್ಗೆ ಅರಿವು ಮೂಡಿಸುವ ಹೊಣೆಗಾರಿಕೆ ನಿಮ್ಮದಾಗಿದೆ. ನೀವು ತಿಳಿದ ವಿಷಯವನ್ನು ಇತರ-ರಿಗೆ ಹಂಚಿಕೊಳ್ಳಿ. ಒಂದು ಮಾತಿನಿಂದಲೂ ಒಂದು ಜೀವ ಉಳಿಯಬಹುದು. ನಿಮ್ಮ ಓದು ಬರಹದಿಂದ ಕೇವಲ ಅಂಕಗಳನ್ನು ಗಳಿಸುವುದಲ್ಲ. ಸಮಾಜದಲ್ಲಿ ಜವಾಬ್ದಾ-ರಿಯುತ ನಾಗರಿಕರಾಗಿ ಬದುಕುವುದೇ ಮುಖ್ಯ. ಹೀಗಾಗಿ, ಪ್ರತಿಯೊಬ್ಬ ವಿದ್ಯಾರ್ಥಿಯು ತನ್ನ ಜೀವನದಲ್ಲಿ ಆರೋಗ್ಯದ ಮಹತ್ವದ ಬಗ್ಗೆ ಅರಿತು, ಇತರರಿಗೂ ತಿಳಿಸಬೇಕು.

ನಾವು ಒಟ್ಟಾಗಿ ಜಾಗೃತಿಯನ್ನು ಹರಡಿದರೆ, ನಮ್ಮ ಸಮಾಜದಲ್ಲಿ ಇಂತಹ ಮಾರಣಾಂತಿ-ಕ ಕಾಯಿಲೆಗೆ ಸ್ಥಾನವೇ ಇರದು" ಎಂದು ಹೇಳಿದರು.

ಕಾರ್ಯಕ್ರಮದಲ್ಲಿ ಡಾ. ಎಮ್. ಎಮ್. ಮಂಟೂರ, ಎ.ಎಸ್. ಪೂಜಾರಿ, ಆರ್. ಎಸ್. ಜಾಧವ, ಶಿತೋಳೆ ಆರ್. ಬಿ., ಶ್ರೀಮತಿ ಪುಷ್ಪಾ ಹುಣಶ್ಯಾಳ, ಡಾ. ಬಿ. ಎನ್. ಜಾಧವ, ಯು. ಎಸ್. ದೇಸಾಯಿ ಇವರು ಉಪಸ್ಥಿತರಿದ್ದರು.

# 50 ಲಕ್ಷ ರೂ. ವೆಚ್ಚದ ಪಶು ಆಸ್ಪತ್ರೆಯ ನೂತನ ಕಟ್ಟಡಕ್ಕೆ ಭೂಮಿಪೂಜೆ

**ತೇರದಾಳ** : ಸರಕಾರಗಳು ನೀಡುವ ಅಭಿವೃದ್ಧಿ ಅನುದಾನಸದ್ಬಳಕೆಯಾಗಬೇಕಾದರೆಕಾಮಗಾ-ರಿಗಳು ಗುಣಮಟ್ಟದಿಂದ ಕೂಡಿರಬೇಕು. ಆ ದಿಶೆಯಲ್ಲಿ ಕೆಲಸ ಮಾಡುವಂತೆ ಅಧಿಕಾರಿಗಳಿಗೆ ಹಾಗೂ ಗುತ್ತಿಗೆದಾರರಿಗೆ ಶಾಸಕ ಸಿದ್ದು ಸವದಿ ನಿರ್ದೇಶನ ನೀಡಿದರು.

ಪಟ್ಟಣದ ಪಶು ಆಸ್ಪತ್ರೆಯ ನೂತನ ಕಟ್ಟಡಕ್ಕೆ ಭೂಮಿ ಪೂಜೆ ನೆರವೇರಿಸಿ ಅವರು ಮಾತನಾಡಿದರು. ಕಟ್ಟಡದ ನಿರ್ಮಾಣಕ್ಕೆ ಐವತ್ತು ಲಕ್ಷ ರೂ. ಅನುದಾನ ಮೀಸಲಿದ್ದು, ನಿಗದಿತ ಅವಧಿಯಲ್ಲಿ ಕಾಮಗಾರಿಯನ್ನು ಪೂರ್ಣಗೊಳಿಸಿ ಎಂದು ಹೇಳಿದರು. ಕಾಮಗಾರಿಗೆ ಏನೇ ಸಹಾಯ ಸಹಕಾರ ಬೇಕಾದರೂ ನೀಡುತ್ತೇವೆ. ಆದರೆ ಅನಾವಶ್ಯಕವಾಗಿ ಹಣ ಖರ್ಚು ಮಾಡಬೇಡಿ ಎಂದು ಪುರಸಭೆ ಅಧ್ಯಕ್ಷೆ ಶಿಲ್ಪಾ ರೋಡಕರ ಹೇಳಿದರು. ಪಶು ವೈದ್ಯಾಧಿಕಾರಿ ಡಾ. ಬಸವರಾಜ ಗೌಡರ, ಬಿಜೆಪಿ ನಗರ ಘಟಕದ ಅಧ್ಯಕ್ಷ ಮಹಾವೀರ ಕೊಕಟನೂರ, ಪುರಸಭೆ ಮಾಜಿ ಸದಸ್ಯ ಗೌತಮ ರೋಡಕರ, ಅಪ್ಪು ಮಂಗಸೂಳಿ, ಅಲ್ಲಪ್ಪ ಬಾಬಗೊಂಡ, ಪ್ರಕಾಶ ಹೊಸಮನಿ, ವರ್ಧಮಾನ ಕಡಹಟ್ಟಿ, ಸದಾಶಿವ ಹೊಸಮನಿ, ರಮೇಶ ಧರೆನ್ನವರ, ಡಾ. ರಾಜಶ್ರೀ ಕಾಂಬಳೆ, ಶಂಕರಯ್ಯ ವಸ್ತ್ರದ, ಕುಂತಿನಾಥ ಸಾವಂತನವರ, ಸಂತೋಷ ಅಕ್ಕೆನ್ನವರ, ಆನಂದ ಮಧುಮಲಿ, ಕಾಶಿನಾಥ ಕಾಲತಿಪ್ಪಿ ಇನ್ನಿತರರು ಭಾಗವಹಿಸಿದ್ದರು.

# ಸಮಾನತೆ ಸ್ಥಾಪನೆಗೆ ಪ್ರಜಾಪ್ರಭುತ್ವ ತತ್ವ ಮಹತ್ವವಾಗಿದೆ: ವಿಠ್ಠಲ ಕಟಕದೊಂಡ



**ವಿಜಯಪುರ :** ಸಂವಿಧಾನದ ಮುಂದೆ ದೇಶದ ಎಲ್ಲ ಪ್ರಜೆಗಳು ಸಮಾನರು ಎಂಬ ಸಮಾನತೆ ಸಂದೇಶವನ್ನು ಸಾರುವ ನಿಟ್ಟಿನಲ್ಲಿ ಪ್ರಜಾಪ್ರಭುತ್ವ ವ್ಯವಸ್ಥೆ ಅತ್ಯಂತ ಮಹತ್ವದಾಗಿದೆ ಎಂದು ಶಾಸಕ ವಿಠಲ ಕಟಕದೊಂಡ ಹೇಳಿದರು.

ಜಿಲ್ಲಾಡಳಿತ, ಜಿಲ್ಲಾ ಪಂಚಾಯತಿ ಹಾಗೂ ಸಮಾಜ ಕಲ್ಯಾಣ ಇಲಾಖೆ ಇವರ ಸಹಯೋಗದೊಂದಿಗೆ ಸೋಮವಾರ ನಗರದ ಕಂದಗಲ್ ಶ್ರೀ ಹನುಮಂತರಾಯರ ರಂಗಮಂದಿರದಲ್ಲಿ ನಡೆದ ಅಂತಾರಾಷ್ಟ್ರೀಯ ಪ್ರಜಾಪ್ರಭುತ್ವ ದಿನಾಚರಣೆ ನನ್ನ ಮತ ನನ್ನ ಹಕ್ಕು ಎಂಬ ಘೋಷ ವಾಕ್ಯದೊಂದಿಗೆ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಅವರು, ಜಗತ್ತಿನ ಅನೇಕ ದೇಶಗಳಲ್ಲಿ ಹಂತ ಹಂತವಾಗಿ ಸಂವಿಧಾನ ಜಾರಿಗೆ ಬಂದು ಅಲ್ಲಿನ ಜನತೆಗೆ ಸಮಾನತೆ ದೊರಕಲು ದೀರ್ಘ ಕಾಲ ಪಡೆಯಿತು. ಆದರೆ, ವಿವಿಧತೆಯಲ್ಲಿ ಏಕತೆ ಇರುವ ಭಾರತ ದೇಶದಲ್ಲಿ ಪ್ರಜಾಪ್ರಭುತ್ವ ಆಧಾರದ ಸಂವಿಧಾನ ಜಾರಿಗೆ ಬಂದ ದಿನದಿಂದಲೇ ಪ್ರತಿಯೊಬ್ಬರಿಗೂ ಸಮಾನತೆ ದೊರೆತಿದೆ ಎಂದು ಅವರು ಹೇಳಿದರು.

ಸರ್ವರ ಏಳ್ಗೆಯ ಅಂಶಗಳನ್ನು ಹೊಂದಿರುವ ಪ್ರಜಾಪ್ರಭುತ್ವದ ಸಂವಿಧಾನದ ಆಶಯಗಳನ್ನು ಸಾರ್ವಜನಿಕರು ಅರಿತುಕೊಂಡು ತಮ್ಮ ಹಕ್ಕು ಪಡೆದುಕೊಳ್ಳುವುದರೊಂದಿಗೆ ದೇಶದ ಪರ ತಮ್ಮ ಕರ್ತವ್ಯಗಳನ್ನು ನಿಭಾಯಿಸಲು ಕಟಿಬದ್ಧವಾಗಿರಬೇಕು ಎಂದು ಅವರು ತಿಳಿಸಿದರು.

ಜಿಲ್ಲಾಧಿಕಾರಿ ಡಾ. ಆನಂದ ಕೆ. ಅವರು ಮಾತನಾಡಿ, ಪ್ರಜಾಪ್ರಭುತ್ವದ ತತ್ವಗಳನ್ನು ಪ್ರತಿಯೊಬ್ಬ ನಾಗರಿಕರು ಅರಿತುಕೊಂಡು ತಮ್ಮ ಜೀವನದಲ್ಲಿ ಅಳವಡಿಸಿಕೊಳ್ಳಬೇಕು. ದೇಶದ ಸರ್ಕಾರ, ಕಾನೂನುಗಳು ಸಂವಿಧಾನದ ಚೌಕಟ್ಟಿನಲ್ಲಿ ನಿರ್ಮಾಣವಾಗುತ್ತವೆ. ಇಲ್ಲಿ ಎಲ್ಲರೂ ಸಮಾನ, ಎಲ್ಲರಿಗೂ ಸಮಾನ ಅವಕಾಶವನ್ನು ಕಲ್ಪಿಸಿಕೊಟ್ಟಿರುವ ನಮ್ಮ ಪ್ರಜಾಪ್ರಭುತ್ವದ ತತ್ವಗಳನ್ನು ಕೇವಲ ಒಂದೇ ದಿನಕ್ಕೆ ಸೀಮಿತಗೊಳಿಸದೆ ಪ್ರತಿದಿನವೂ ಚಾಚೂ ತಪ್ಪದೆ ಪಾಲಿಸಬೇಕು ಎಂದು ಅವರು ಹೇಳಿದರು.

ಪ್ರಜಾಪ್ರಭುತ್ವದ ಎಲ್ಲ ತತ್ವಗಳನ್ನು ನಾಗರಿಕರು ಅರ್ಥ ಮಾಡಿಕೊಳ್ಳಬೇಕು. ಮತದಾನ ಪ್ರಜಾತಂತ್ರದ ಒಂದು ಭಾಗ. ನಮ್ಮ ದೇಶದಲ್ಲಿ ಮತದಾನದ ಹಕ್ಕು ಸಂವಿಧಾನದ ಜಾರಿಯಾದ ಪ್ರಾರಂಭದಲ್ಲಿಯೇ ಎಲ್ಲರಿಗೂ ದಕ್ಕಿದೆ. ಬೇರೆ ದೇಶಗಳ ಸಂವಿಧಾನ ತಿಳಿದುಕೊಂಡಾಗ ಮತದಾನ ಹಕ್ಕಿನ ಮಹತ್ವ ತಿಳಿದುಕೊಳ್ಳಬಹುದಾಗಿದೆ ಎಂದು ಅವರು ಹೇಳಿದರು.

ಭಾರತವು ಅತ್ಯಂತ ಯಶಸ್ವಿನ ಪ್ರಜಾಪ್ರಭುತ್ವ ವ್ಯವಸ್ಥೆ ಹೊಂದಿದ ದೇಶವಾಗಿದೆ. ಅನೇಕ ಗಣ್ಯರ ಪರಿಶ್ರಮದಿಂದ ರಚಿಸಿರುವ ಅಮೂಲ್ಯವಾದ ನಮ್ಮ ಸಂವಿಧಾನ ಪ್ರತಿಯೊಬ್ಬರಿಗೆ ಸಮಾನ ಅವಕಾಶ ನೀಡಿದ್ದು, ಅದರ ಆಶಯದಂತೆ ನಾವೆಲ್ಲರೂ ನಡೆದುಕೊಳ್ಳೋಣ ಎಂದು ಅವರು ಹೇಳಿದರು.

ಪ್ರಜೆಗಳಿಂದ, ಪ್ರಜೆಗಳಿಗಾಗಿ, ಪ್ರಜೆಗಳಿಗೋಸ್ಕರ ಇರುವ ಪ್ರಜಾಪ್ರಭುತ್ವದ ದಿನಾಚರಣೆಯ ಅಂಗವಾಗಿ ರಾಜ್ಯದ ಎಲ್ಲ ಜಿಲ್ಲೆಯಿಂದ ನಿನ್ನೆ ತೆರಳಿದ 10 ಬೈಕ್‌ಗಳ ರ್‍ಯಾಲಿಯು ಇಂದು ಬೆಂಗಳೂರಿನ ವಿಧಾನ ಸಭೆಯಲ್ಲಿ ನಡೆಯುವ ರಾಜ್ಯಮಟ್ಟದ ಕಾರ್ಯಕ್ರಮದಲ್ಲಿ ಪಾಲ್ಗೊಂಡಿವೆ. ಇಂದು ಬೆಳಿಗ್ಗೆ ಜಿಲ್ಲಾಮಟ್ಟದ ಆಯೋಜಿಸಿದ ಸೈಕಲ್ ರ್‍ಯಾಲಿಯೂ ಅತ್ಯಂತ ಯಶಸ್ವಿಯಾಗಿ ಜರುಗಿತು ಎಂದು ಹೇಳಿದ ಅವರು, ಪ್ರಜಾಪ್ರಭುತ್ವದ ಅಂಗವಾಗಿ ಭಾಷಣ ಸ್ಪರ್ಧೆ, ಚಿತ್ರಕಲಾ ಸ್ಪರ್ಧೆ ಹಾಗೂ ಛಾಯಾಚಿತ್ರ ಸ್ಪರ್ಧೆಗಳನ್ನು ಏರ್ಪಡಿಸಲಾಗುತ್ತಿದೆ. ಈ ಸ್ಪರ್ಧೆಗಳಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ವಿದ್ಯಾರ್ಥಿಗಳು ಭಾಗವಹಿಸುವಂತೆ ಅವರು ಕರೆ ನೀಡಿದರು.

ಜಿಲ್ಲಾ ಪಂಚಾಯತಿಯ ಮುಖ್ಯ ಕಾರ್ಯ ನಿರ್ವಹಣಾಧಿಕಾರಿ ರಿಷಿ ಆನಂದ ಮಾತನಾಡಿ, ಬಸವಣ್ಣನವರು 12ನೇ ಶತಮಾನದಲ್ಲಿಯೇ ಅನುಭವ ಮಂಟಪ ಸ್ಥಾಪಿಸಿ, ಸಮಾನತೆಯ ಸಂದೇಶವನ್ನು ಸಾರಿದರು. ಜಗತ್ತಿನಾದ್ಯಂತ ಪ್ರಖ್ಯಾತಿ ಪಡೆದಿರುವ ಅನುಭವ ಮಂಟಪ ನಮ್ಮ ಕರ್ನಾಟಕದಲ್ಲಿರುವುದು ನಮ್ಮ ಹೆಮ್ಮೆಯಾಗಿದೆ ಎಂದು ಅವರು ಹೇಳಿದರು.

ಪ್ರಜಾಪ್ರಭುತ್ವದಲ್ಲಿ ಸರ್ವೋಚ್ಚ ಅಧಿಕಾರಿ ಸಾರ್ವಜನಿಕರ ಕೈಯಲ್ಲಿರುತ್ತದೆ. ತಮ್ಮ ನಾಯಕರನ್ನು ಆಯ್ಕೆ ಮಾಡುವ ಸ್ವಾತಂತ್ರ ಸಾರ್ವಜನಿಕರಿಗೆ ಸಂವಿಧಾನ ನೀಡಿದೆ. ವಿಶ್ವದಲ್ಲಿ ಅತ್ಯಂತ ದೊಡ್ಡ ಸಂವಿಧಾನ ಎಂಬ ಹೆಗ್ಗಳಿಕೆಗೆ ಪಾತ್ರವಾಗಿರುವ ನಮ್ಮ ಸಂವಿಧಾನದ ಪರ ನಮ್ಮ ಜವಾಬ್ದಾರಿಯನ್ನು ನಾವೆಲ್ಲರೂ ಪಾಲಿಸಬೇಕು ಎಂದು ಅವರು ಹೇಳಿದರು.

ಡಾ. ಮಂಜುನಾಥ ಕೋರಿ ಅವರು ಉಪನ್ಯಾಸ ನೀಡಿ, ದೇಶದ ಪ್ರಜಾಪ್ರಭುತ್ವ ಸಂವಿಧಾನ ಜಗತ್ತಿಗೆ ಮಾದರಿಯಾಗಿದೆ. ಸಾರ್ವಭೌಮ, ಸ್ವಾತಂತ್ರ, ಕಾನೂನು ಪ್ರಭುತ್ವ, ಬಹುಮತ ತತ್ವ, ಅಲ್ಪಸಂಖ್ಯಾತರ ಹಕ್ಕುಗಳ ರಕ್ಷಣೆ ಅಂಶಗಳನ್ನು ಹೊಂದಿರುವ ಸಂವಿಧಾನದ ರಚನೆ ಮಾಡಿರುವ ಹಕ್ಕು ಮತ್ತು ಕರ್ತವ್ಯಗಳ ಸಮತೋಲನವನ್ನು ಸಂವಿಧಾನದಲ್ಲಿ ಸೇರಿಸುವುದರ ಮೂಲಕ ದೇಶದ ಪ್ರತಿ ಪ್ರಜೆಗೂ ದೇಶದ ಪರ ಕರ್ತವ್ಯಗಳನ್ನು ವಹಿಸಿದ್ದಾರೆ. ಎಲ್ಲರಿಗೂ ಹೊಂದಿಕೆಯಾಗುವಂತಹ ಸಂವಿಧಾನವನ್ನು ರಚಿಸಿ, ಸಂವಿಧಾನಕ್ಕೆ ಮತದಾನ ಎಂಬ ಜೀವಾಳ ತುಂಬಿದ ಕೀರ್ತಿ ಡಾ. ಬಿ.ಆರ್. ಅಂಬೇಡ್ಕರ್ ಅವರಿಗೆ ಸಲ್ಲುತ್ತದೆ. ಮತದಾನವು ಸಮಾನತೆಯ ಆಧಾರದ ಮೇಲೆ ಸರ್ವರಿಗೂ ಸಲ್ಲಿದ ಅವಕಾಶ. ಮತದಾರರು ಸರ್ಕಾರದ ನಿರ್ಣಯದಲ್ಲಿ ಮಹತ್ವದ ಪಾತ್ರ ನಿರ್ವಹಿಸುವರು ಎಂದು ಅವರು ಹೇಳಿದರು.

ಮತದಾರರು ಉತ್ತಮ ನಾಯಕರ ಆಯ್ಕೆ ಮಾಡವ ಜವಾಬ್ದಾರಿ ಹೊಂದಿರುತ್ತಾರೆ. ಮತದಾರರ ಮತವು ಭಾರತದ ಉಜ್ವಲ ಭವಿಷ್ಯದ ನಿರ್ಣಯ ಮಾಡುತ್ತದೆ ಎಂದು ಅವರು ಹೇಳಿದರು.

ಇತ್ತೀಚೆಗೆ ನೇಪಾಳದ ಪ್ರಧಾನಿಯಾಗಿ ಆಯ್ಕೆಯಾಗಿರುವ ಸುಶೀಲಾ ಕರ್ಕಿಯವರು ಭಾರತದ ಸಹಾಯದೊಂದಿಗೆ ಸಂಸತು ರಚಿಸುತ್ತೇವೆ. ತಮ್ಮ ದೇಶದ ಹೊಸ ಸಂಸತ್ತಿನ ಸರ್ಕಾರ ರಚಿಸುತ್ತೇವೆ ಎಂದು ಹೇಳಿರುವುದು ನಮ್ಮ ಸಂವಿಧಾನದ ಹೆಮ್ಮೆಯಾಗಿದೆ ಎಂದು ಅವರು ಹೇಳಿದರು.

ಈ ಸಂದರ್ಭದಲ್ಲಿ ಭಾಷಣ ಸ್ಪರ್ಧೆ, ಚಿತ್ರಕಲಾ ಸ್ಪರ್ಧೆ ಹಾಗೂ ಛಾಯಾಚಿತ್ರ ಸ್ಪರ್ಧೆಗಳ ಕರಪತ್ರ ಬಿಡುಗಡೆಗೊಳಿಸಲಾಯಿತು.

ಸಂವಿಧಾನ ಶಿಲ್ಪಿ ಡಾ ಬಾಬಾಸಾಹೇಬ ಅಂಬೇಡ್ಕರ್ ಅವರ ಭಾವ ಚಿತ್ರಕ್ಕೆ ಪುಷ್ಪಾರ್ಚನೆ ಮಾಡಲಾಯಿತು.

ಸಮಾಜ ಕಲ್ಯಾಣ ಇಲಾಖೆಯ ಉಪ ನಿರ್ದೇಶಕ ಮಹೇಶ ಪೋತದಾರ ಸ್ವಾಗತಿಸಿದರು. ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆಯ ಸಹಾಯಕ ನಿರ್ದೇಶಕ ರಾಜಶೇಖರ ದೈವಾಡಿ ನಿರೂಪಿಸಿದರು. ಸಮಾಜ ಕಲ್ಯಾಣ ಇಲಾಖೆಯ ಸಹಾಯಕ ನಿರ್ದೇಶಕ ಬಿ.ಜೆ. ಇಂಡಿ ವಂದಿಸಿದರು.

ಕಾರ್ಯಕ್ರಮದಲ್ಲ್ಲಿ ಹೆಚ್ಚುವರಿ ಪೊಲೀಸ್ ವರಿಷ್ಠಾಧಿಕಾರಿ ರಾಮಣ್ಣಗೌಡ ಹಟ್ಟಿ, ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ ಉಪ ನಿರ್ದೇಶಕ ಪುಂಡಲಿಕ ಮಾನವರ, ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಾಯಕ ನಿರ್ದೇಶಕ ಸಂತೋಷ ಭೋವಿ, ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆಯ ಉಪನಿರ್ದೇಶಕ ವೀರಯ್ಯ ಸಾಲಿಮಠ, ಪಶುಸಂಗೋಪನಾ ಇಲಾಖೆಯ ಉಪ ನಿರ್ದೇಶಕ ಅಶೋಕ ಗೋಣಸಗಿ, ಮುಖಂಡರುಗಳಾದ ವಿದ್ಯಾವತಿ ಅಂಕಲಗಿ, ಅಡಿವೆಪ್ಪ ಸಾಲಗಲ್, ಸಿದ್ದು ರಾಯಣ್ಣವರ, ಅಭಿಷೇಕ ಚಕ್ರವರ್ತಿ, ಭೀಮರಾಯ ಜಿಗಜಿಣಗಿ, ಸಂತೋಷ ಶಹಾಪೂರ, ವಿನಾಯಕ ಗುಣಸಾಗರ, ಅಶೋಕ ಚಲವಾದಿ, ಚೆನ್ನು ಕಟ್ಟಿಮನಿ, ಮಲ್ಲಿಕಾರ್ಜುನ ಬಟಗಿ, ವಿವಿಧ ಇಲಾಖೆಯ ಅಧಿಕಾರಿಗಳು ಹಾಗೂ ಸಿಬ್ಬಂದಿಗಳು ಉಪಸ್ಥಿತರಿದ್ದರು.

ಸೈಕಲ್ ಜಾಥಾ: ಅಂತರಾಷ್ಟ್ರಿಯ ಪ್ರಜಾಪ್ರಭುತ್ವ ದಿನಾಚರಣೆ ಅಂಗವಾಗಿ ನನ್ನ ಮತ ನನ್ನ ಹಕ್ಕು ಜಾಗೃತಿ ಅಭಿಯಾನದ ಅಂಗವಾಗಿ ಜಿಲ್ಲಾಡಳಿತ ವತಿಯಿಂದ ಸೋಮವಾರ ಬೆಳಿಗ್ಗೆ ಆಯೋಜಿಸಿದ ಸೈಕಲ್ ಜಾಥಾಕ್ಕೆ ಮಹಾನಗರ ಪಾಲಿಕೆಯ ಮಹಾಪೌರ ಮಡಿವಾಳಪ್ಪ ಕರಡಿ ಅವರು ಗೋಲಗುಂಬಜ್ ಆವರಣದಲ್ಲಿ ಹಸಿರು ನಿಶಾನೆ ತೋರಿಸಿ ಚಾಲನೆ ನೀಡಿದರು.

ಗೋಲಗುಂಬಜ್ ಆವರಣದಿಂದ ಪ್ರಾರಂಭಗೊಂಡ ಈ ಜಾಥಾವು ಕನಕದಾಸ ವೃತ್ತ, ಗಣಪತಿ ವೃತ್ತ, ಶ್ರೀ ಸಿದ್ದೇಶ್ವರ ದೇವಸ್ಥಾನ, ಗಾಂಧಿ ವೃತ್ತ, ಶಿವಾಜಿ ವೃತ್ತ, ಮೀನಾಕ್ಷಿ ವೃತ್ತ, ಕೇಂದ್ರ ಬಸ್ ನಿಲ್ದಾಣ, ಬಸವೇಶ್ವರ ವೃತ್ತದಿಂದ, ಅಂಬೇಡ್ಕರ್ ವೃತ್ತದವರೆಗೆ ಸಮಾವೇಶಗೊಂಡಿತ್ತು. ವಿದ್ಯಾರ್ಥಿಗಳು, ಅಧಿಕಾರಿಗಳು, ಸಿಬ್ಬಂದಿಗಳು, ವಿವಿಧ ಸಂಘ-ಸಂಸ್ಥೆಗಳ ಪದಾಧಿಕಾರಿಗಳು ಈ ಜಾಥಾದಲ್ಲಿ ಪಾಲ್ಗೊಂಡಿದ್ದರು.

ಈ ಸಂದರ್ಭದಲ್ಲಿ ಜಿಲ್ಲಾ ಪಂಚಾಯತಿಯ ಮುಖ್ಯ ಕಾರ್ಯ ನಿರ್ವಹಣಾಧಿಕಾರಿ ರಿಷಿ ಆನಂದ, ಮಹಾನಗರ ಪಾಲಿಕೆಯ ಆಯುಕ್ತ ವಿಜಯಕುಮಾರ ಮೆಕ್ಕಳಕಿ, ಜಿಲ್ಲಾ ಪಂಚಾಯತಿಯ ಉಪ ಕಾರ್ಯದರ್ಶಿ ಸಿ.ಬಿ. ಕುಂಬಾರ, ಸಮಾಜ ಕಲ್ಯಾಣ ಇಲಾಖೆಯ ಉಪ ನಿರ್ದೇಶಕ ಮಹೇಶ ಪೋತದಾರ, ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ ಉಪ ನಿರ್ದೇಶಕ ಪುಂಡಲಿಕ ಮಾನವರ, ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆಯ ಸಹಾಯಕ ನಿರ್ದೇಶಕ ರಾಜಶೇಖರ ದೈವಾಡಿ ಸೇರಿದಂತೆ ವಿವಿಧ ಇಲಾಖೆಯ ಅಧಿಕಾರಿಗಳು ಹಾಗೂ ಸಿಬ್ಬಂದಿಗಳು ಉಪಸ್ಥಿತರಿದ್ದರು.

# ಡಿಜೆಯಿಂದ ದೇಶದ ಕಲೆ, ಸಂಸ್ಕೃತಿ ಮಾಯ: ಸಚಿವ ಶಿವಾನಂದ ಪಾಟೀಲ

**ಬಸವನಬಾಗೇವಾಡಿ :** ನಮ್ಮ ದೇಶದ ಪ್ರತಿಯೊಂದು ಹಬ್ಬಗಳಿಗೂ ಕಲೆ, ಸಂಸ್ಕಾರದ ಮೆರುಗು ಇದೆ. ಆದರೆ ಡಿಜೆ ಸಂಸ್ಕೃತಿಯಿಂದ ನಮ್ಮ ಕಲೆ, ಸಂಸ್ಕೃತಿ ಹಾಗೂ ನಮ್ಮಲ್ಲಿರುವ ಪ್ರತಿಭೆಗಳು ಮರೆಯಾಗುತ್ತಿವೆ. ಜಾತ್ಯತೀತ ಮನೋಭಾವದ ಜೊತೆಗೆ ಜಾತೀಯತೆ ಮರೆತು, ಮನುಷ್ಯತ್ವ ಮೆರೆಯುವ ಏಕೈಕ ಹಬ್ಬ ಗಣೇಶೋತ್ಸವ ಎಂದು ಸಚಿವ ಶಿವಾನಂದ ಪಾಟೀಲ ಹೇಳಿದರು.ಪಟ್ಟಣದ ಹಿಂದೂ ಮಹಾಗಣಪತಿ ಮಹಾಮಂಡಳದಿಂದ ಭಾನುವಾರ ಜರುಗಿದ ಬಹಿರಂಗ ಸಭೆಯಲ್ಲಿ ಮಾತನಾಡಿದ ಅವರು, ಕಾಶ್ಮೀರದಿಂದ ಕನ್ಯಾಕುಮಾರಿವರೆಗೂ ಎಲ್ಲ ಹಿಂದೂಗಳು ಒಂದಾಗಿ ಆಚರಿಸುವ ಹಬ್ಬ ಗಣೇಶೋತ್ಸವ.ಸ್ವಲ್ಪ ಎಚ್ಚರ ತಪ್ಪಿದರೆ ಎಂತಹ ಅನಾಹುತವಾಗುತ್ತದೆ ಎಂಬುದಕ್ಕೆ ಹಾಸನದ ಗಣೇಶ ಮೆರವಣಿಗೆಯಲ್ಲಿ ಸಂಭವಿಸಿದ ದುರಂತವೇ ನಿದರ್ಶನ. ಹಬ್ಬಗಳಿರುವುದು ನಮ್ಮ ಮನಸ್ಸುಗಳನ್ನು ಬೆಸೆಯಲು ಹೊರತು ಒಡೆಯಲು ಅಲ್ಲ.




ಹಬ್ಬಗಳನ್ನು ದುರುಪಯೋಗ ಮಾಡಿಕೊಳ್ಳದೇ ಸದುಪಯೋಗ ಮಾಡಿಕೊಂಡರೆ ಹಬ್ಬಗಳಿಗೆ ಮೆರುಗು ಬರುತ್ತವೆ ಎಂದು ಹೇಳಿದರು.

ವಿರಕ್ತಮಠದ ಸಿದ್ದಲಿಂಗ ಮಾತನಾಡಿದರು. ರಾಜ್ಯೋತ್ಸವ ಪ್ರಶಸ್ತಿ ಪುರಸ್ಕೃತ ಹಿರಿಯ ಜನಪದ ಕಲಾವಿದ ಬಸವರಾಜ ಹಾರಿವಾಳ, ಮುಖಂಡರಾದ ಸಂಗಮೇಶ ಓಲೇಕಾರ, ಕಲ್ಲು ಸೊನ್ನದ, ಕದಳಿ ವೇದಿಕೆ ತಾಲ್ಲೂಕು ಘಟಕದ ಅಧ್ಯಕ್ಷೆ ಸಾವಿತ್ರಿ ಕಲ್ಯಾಣಶೆಟ್ಟಿ, ಬೆಳಗಾವಿ ವಿಹೆಚ್ಪಿ ವಿಭಾಗೀಯ ಕಾರ್ಯದರ್ಶಿ ವಿಠಲ ಮಾಳಿ ಮಾತನಾಡಿದರು.ಪ್ರತಿಭಾನ್ವಿತ ವಿದ್ಯಾರ್ಥಿಗಳಿಗೆ, ಸಾಧಕರಿಗೆ, ಸಾಮಾಜಿಕ ಕಾರ್ಯಕರ್ತರಿಗೆ ಸನ್ಮಾನಿಸಲಾಯಿತು.ಎಪಿಎಂಸಿ ಮಾಜಿ ಅಧ್ಯಕ್ಷ ಶೇಖರ ಗೊಳಸಂಗಿ, ವಿಎಚ್‌ಪಿ ಜಿಲ್ಲಾ ಪ್ರಮುಖ ಜಯಪ್ರಕಾಶ ಅಂಬಲಿ, ರಾಜೇಂದ್ರ ಪತ್ತಾರ, ಹಿಂದೂ ಮಹಾಗಣಪತಿ ಮಹಾಮಂಡಳ ಅಧ್ಯಕ್ಷ ಬಸವರಾಜ ಉಕ್ಕಲಿ, ಉಪಾಧ್ಯಕ್ಷ ನಾಗು ಯಂಭತ್ನಾಳ, ಸಂಜು ಬಿರಾದಾರ, ಅಪ್ಪು ಗಬ್ಬೂರ, ರಾಹುಲ ಜಗತಾಪ, ಬಸವರಾಜ ಅಳ್ಳಗಿ, ಚನ್ನು ಶಿವಗೊಂಡ ಇತರರಿದ್ದರು.

# ಕಾಂಗ್ರೆಸ್ ಸರಕಾರ ಜನರಿಗೆ ಕೊಟ್ಟ ವಚನ ಈಡೇರಿಸಿದೆ

**ಜಮಖಂಡಿ :** ಮುಖ್ಯಮಂತ್ರಿ ಸಿದ್ದರಾಮಯ್ಯ ಅಹಿಂದ ನೆಲೆಗಟ್ಟಿನಿಂದ ಬಂದವರು.ಅವರು ಶೋಷಿತ ಸಮುದಾಯಗಳ ಬಗ್ಗೆ ಅಪಾರ ಕಾಳಜಿ ಹೊಂದಿರುವರು. ಚುನಾವಣಾ ಪ್ರಣಾಳಿಕೆಯಲ್ಲಿ ನೀಡಿದ ಭರವಸೆಯಂತೆ ಒಳಮೀಸಲಾತಿ ಜಾರಿಗೊಳಿಸಿದ್ದಾರೆ ಎಂದು ಮಾಜಿ ಶಾಸಕ ಆನಂದ ನ್ಯಾಮಗೌಡ ಹೇಳಿದರು.



ನಗರದ ರಮಾ ನಿವಾಸ ಸಭಾ ಭವನದಲ್ಲಿ ಶನಿವಾರ ರಾಜ್ಯ ದಲಿತ ಸಂಘರ್ಷ ಸಮಿತಿ ಮತ್ತು ಮಾದಿಗ ಸಂಘಟನೆಗಳ ಒಕ್ಕೂಟದಿಂದ ಒಳಮೀಸಲಾತಿ ಜಾರಿಗೊಳಿಸಿದ ಹಿನ್ನೆಲೆಯಲ್ಲಿ ಹಮ್ಮಿಕೊಂಡಿದ್ದ ಅಭಿನಂದನಾ ಸಭೆಯಲ್ಲಿ ಮಾತನಾಡಿದ ಅವರು ರಾಷ್ಟ್ರೀಯ ನಾಯಕ ರಾಹುಲ್ ಗಾಂಧಿ, ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಮಾರ್ಗದರ್ಶನದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯನವರು ಸಚಿವ ಸಂಪುಟದ ಎಲ್ಲ ಸಚಿವರನ್ನು ವಿಶ್ವಾಸಕ್ಕೆ ತೆಗೆದುಕೊಂಡು ಅತ್ಯಂತ ಕಠಿಣವಾದ 101 ಜಾತಿಗಳಲ್ಲಿ ಅವರ ಜಾತಿ ಜನಸಂಖ್ಯೆಗನುಗುಣವಾಗಿ ಎಡಗೈ ಸಮುದಾಯದವರಿಗೆ ಶೇ.ಆರರಷ್ಟು, ಬಲಗೈ ಸಮುದಾಯದವರಿಗೆ ಶೇ. ಆರರಷ್ಟು ಹಾಗೂ ಸ್ಪರ್ಶ ಸಮುದಾಯಕ್ಕೆ ಐದರಷ್ಟು ಮೀಸಲಾತಿ ನೀಡುವ ಮೂಲಕ ನಾಗಮೋಹನದಾಸ್ ವರದಿಯ ಮೀಸಲಾತಿ ಜಾರಿಗೊಳಿಸಿದ್ದಾರೆ ಎಂದರು.

ರಾಜ್ಯ ದಲಿತ ಸಂಘರ್ಷ ಸಮಿತಿ ಜಿಲ್ಲಾ ಸಂಘಟನಾ ಸಂಚಾಲಕ ಮುತ್ತಣ್ಣ ಮೇತ್ರಿ ಮಾತನಾಡಿ, ತೊಂಭತ್ತರ ದಶಕದಲ್ಲಿ ಒಳಮೀಸಲಾತಿ ಹೋರಾಟ ಆರಂಭವಾಗಿ ಹುನುಗುಂದ ಉಪ ಚುನಾವಣೆಯಲ್ಲಿ ಆಗಿನ ಮುಖ್ಯಮಂತ್ರಿ ಎಸ್. ಎಂ. ಕೃಷ್ಣ ಅವರು ಚುನಾವಣಾ ಪ್ರಚಾರಕ್ಕೆ ಹುನಗುಂದ ಮತಕ್ಷೇತ್ರಕ್ಕೆ ಆಗಮಿಸಿದ್ದಾಗ ಬೃಹತ್ ಪ್ರತಿಭಟನೆ ಮೂಲಕ ಒಳ ಮೀಸಲಾತಿಗಾಗಿ ಒತ್ತಾಯಿಸಲಾಗಿತ್ತು.

35 ವರ್ಷಗಳ ನಿರಂತರ ಹೋರಾಟದ ಮೂಲಕ ಸರ್ಕಾರದ ಗಮನ ಸೆಳೆಯಲಾಯಿತು.

ಸರ್ಕಾರ ಪ್ರಣಾಳಿಕೆಯಲ್ಲಿ ನೀಡಿದ ನಾಗಮೋಹನ ದಾಸ್ ವರದಿ ಪ್ರಕಾರ ಒಳ ಮೀಸಲಾತಿಯನ್ನು ಜಾರಿಗೊಳಿಸಿರುವ ಮುಖ್ಯ ಮಂತ್ರಿಗಳು, ಉಪ ಮುಖ್ಯಮಂತ್ರಿಗಳು ಮತ್ತು ಸಚಿವರನ್ನು ಅಭಿನಂದಿಸುತ್ತೇವೆ ಎಂದರು.

ದಲಿತ ಮುಖಂಡ ಶ್ಯಾಮರಾವ ಘಾಟಗೆ ಮಾತನಾಡಿ, ಒಳಮೀಸಲಾತಿ ಜಾರಿಗೆ ತರುವಲ್ಲಿ ಶ್ರಮಿಸಿದ ಮುಖ್ಯ ಮಂತ್ರಿ ಸಿದ್ದರಾಮಯ್ಯ, ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ, ಗೃಹಸಚಿವ ಡಾ. ಜಿ. ಪರಮೇಶ್ವರ, ಸಚಿವರಾದ ಎಚ್. ಕೆ. ಪಾಟೀಲ, ಎಂ. ಬಿ. ಪಾಟೀಲ, ಶಿವಾನಂದ ಪಾಟೀಲ, ಕೆ.ಎಚ್.ಮುನಿಯಪ್ಪ, ಸತೀಶ ಜಾರಕಿಹೊಳಿ, ಡಾ. ಮಾದೇವಪ್ಪ, ಪ್ರಿಯಾಂಕ್ ಖರ್ಗೆ, ಆರ್. ಬಿ. ತಿಮ್ಮಾಪೂರ ಇವರೆಲ್ಲರ ಪ್ರಯತ್ನದ ಫಲವಾಗಿ ಒಳಮೀಸಲಾತಿ ಜಾರಿಗೊಳಿಸಿರುವ ಹಿನ್ನೆಲೆಯಲ್ಲಿ ಅಭಿನಂದನೆ ಸಲ್ಲಿಸಿದರು.

ಇದೇ ಸಂದರ್ಭದಲ್ಲಿ ರಾಜ್ಯ ದಲಿತ ಸಂಘರ್ಷ ಸಮಿತಿ ಹಾಗೂ ಮಾದಿಗ ಸಮುದಾಯದಿಂದ ಮಾಜಿ ಶಾಸಕ ಆನಂದ ನ್ಯಾಮಗೌಡ ಅವರನ್ನು ಸನ್ಮಾನಿಸಲಾಯಿತು. ವೇದಿಕೆಯಲ್ಲಿ ನಗರಸಭೆ ಸದಸ್ಯ ದಾನೇಶ ಘಾಟಗೆ, ಮುಖಂಡರಾದ ಮಾರುತಿ ಮರೆಗುದ್ದಿ, ಪರಶುರಾಮ ಮಾಂಗ, ಕುಮಾರ ಆಲಗೂರ, ಯಮನಪ್ಪ ಘಾಟಗೆ, ಮುಕೇಶ ಕುಲಹಳ್ಳಿ, ಪಾಂಡಪ್ಪ ಹೊಸಮನಿ, ಗೋವಿಂದ ಗಸ್ತಿ, ಕಡ್ಲೆಪ್ಪ ದೊಡ್ಡಮನಿ, ಸಂಜು ಪೂಜಾರಿ, ಬಸವರಾಜ ಜಮಖಂಡಿ, ಸುನೀಲ ಘಾಟಗೆ ಸಹಿತ ಇನ್ನೂ ಹಲವರು ಉಪಸ್ಥಿತರಿದ್ದರು.

# ದೇಶ ಕಟ್ಟುವಲ್ಲಿ ಯುವಕರದು ನಿರ್ಣಾಯಕ ಪಾತ್ರ

**ಬಾಗಲಕೋಟ :** ದೊಡ್ಡ ಪ್ರಜಾಪ್ರಭುತ್ವ ರಾಷ್ಟ್ರವಾಗಿರುವ ನಮ್ಮ ದೇಶದ ಸಂವಿಧಾನ-ಎಲ್ಲರಿಗೂ ಸಮಾನತೆ, ಮಾತನಾಡುವ ಹಕ್ಕು ಸಹಿತ ಹಲವು ಹಕ್ಕುಗಳನ್ನು ನೀಡಿದ್ದು ಅವುಗಳ ಸರಿಯಾದ ಬಳಕೆಯಾಗಬೇಕು ಎಂದು ಸಂಸ್ಥೆಯ ಗೌರವ ಕಾರ್ಯದರ್ಶಿ ಡಾ.ಗಿರೀಶ ಮಸೂರಕರ ಹೇಳಿದರು.



ಇಲ್ಲಿನ ವಿದ್ಯಾ ಪ್ರಸಾರಕ ಮಂಡಳದ ಎಸ್. ಆರ್. ನರಸಾಪೂರ ಕಲಾ ಹಾಗೂ ಎಂ.ಬಿ. ಶಿರೂರ ವಾಣಿಜ್ಯ ಮಹಾವಿದ್ಯಾಲಯದ ಆಯ್‌ಕ್ಯೂಎಸಿ ಮತ್ತು ರಾಜ್ಯಶಾಸ್ತ್ರ ವಿಭಾಗ ಅಂತಾರಾಷ್ಟ್ರೀಯ ಪ್ರಜಾಪ್ರಭುತ್ವ ದಿನಾಚರಣೆಯ ಅಂಗವಾಗಿ ಸೋಮವಾರ ಹಮ್ಮಿಕೊಂಡಿದ್ದ ಜಾಗೃತಿ ಜಾಥಾಕ್ಕೆ ಚಾಲನೆ ನೀಡಿ ಅವರು ಮಾತನಾಡಿದರು.

ಒಂದು ವೇಳೆ ಪ್ರಜಾಪ್ರಭುತ್ವ ವ್ಯವಸ್ಥೆ ಇರದೇ ಹೋಗಿದ್ದರೆ ನಾವೆಲ್ಲ ಸರ್ವಾಧಿಕಾರಿ ಆಡಳಿತಕ್ಕೆ ಒಳಗಾಗುತ್ತಿದ್ದೆವು. ಕಷ್ಟವನ್ನು-ಎದುರಿಸಬೇಕಾಗುತ್ತಿತ್ತು.ಯುವಕರು ದೇಶದ ಬಗ್ಗೆ ಅಭಿಮಾನವನ್ನು ಬೆಳೆಸಿಕೊಂಡು ದೇಶರಕ್ಷಣೆಗೆ ಮುಂದಾಗಬೇಕು ಎಂದರು.

ವಿವಿಧತೆಯಲ್ಲಿ ಏಕತೆಯನ್ನು ಬಿಂಬಿಸುವ ವಿವಿಧ ರಾಜ್ಯಗಳ ವೇಷಭೂಷಣಗಳೊಂದಿಗೆ ವಿದ್ಯಾರ್ಥಿಗಳು ಸಾಗಿಬಂದರು. ಸದಸ್ಯ-ಎಸ್.ಕೆ.ಕುಲಕರ್ಣಿ ಇದ್ದರು.

ನಂತರ ನಡೆದ ವೇದಿಕೆ ಕಾರ್ಯಕ್ರಮದಲ್ಲಿ ಅತಿಥಿಗಳಾಗಿ ಮಾತನಾಡಿದ ಶ್ರೀಮತಿ ಎಸ್. ಎಂ.ಜೇವೂರ, ಪ್ರಜಾಪ್ರಭುತ್ವದ ರಕ್ಷಣೆಗೆ ಶಿಕ್ಷಣ ಬೇಕು. ಅದರ ಮೌಲ್ಯ ಹಾಗೂ ತತ್ವಗಳನ್ನು ಎತ್ತಿಹಿಡಿಯಬೇಕು. ಚುನಾವಣೆ ಮತ್ತು ಮತದಾನ ಪ್ರಕ್ರಿಯೆಯಲ್ಲಿ ಯುವಕರು ತಮ್ಮ ಜವಾಬ್ದಾರಿಯನ್ನು ಸರಿಯಾದ ರೀತಿಯಲ್ಲಿ ನಿರ್ವಹಿಸಿದರೆ ಪ್ರಜಾಪ್ರಭುತ್ವವನ್ನು ಗಟ್ಟಿಗೊಳಿಸಬಹುದು-ಎಂದರು.

ವಿದ್ಯಾರ್ಥಿಗಳಾದ ತುಳಸವ್ವಾ ಹಲಕುರ್ಕಿ, ಕಾವೇರಿ ಕಿರಸೂರ, ನಾಗರಾಜ ಗಂಜ್ಯಾಳ, ಸ್ಪಂದನಾ ಬಾಸುತ್ಕರ, ಭ್ರಮರಾ ಮಡಿವಾಳ ಹಾಗೂ ಸಂಗಯ್ಯ ಸಾರಂಗಮಠ ಮಾತನಾಡಿದರು.

ಅಧ್ಯಕ್ಷತೆ ವಹಿಸಿ ಮಾತನಾಡಿದ ಪ್ರಾಚಾರ್ಯ ಶ್ರೀನಿವಾಸ ನರಗುಂದ, ವಿದ್ಯಾರ್ಥಿಗಳು ಪ್ರಜಾಪ್ರಭುತ್ವ ಹಾಗೂ ಸಂವಿಧಾನದ ಆಶಯವನ್ನು ಅರಿತುಕೊಂಡು ಅದನ್ನು ಸಾಕಾರಗೊಳಿಸುವ ಪ್ರಯತ್ನ ಮಾಡಬೇಕು. ಸಂವಿಧಾನವನ್ನು ಅಳವಡಿಸಿಕೊಂಡ ನಂತರ ಎಲ್ಲರಿಗೂ ಮತದಾನದ ಹಕ್ಕನ್ನು ನೀಡಿದೆ. ಅದನ್ನು ಸರಿಯಾದ ರೀತಿಯಲ್ಲಿ ಬಳಸಿಕೊಂಡು ಯೋಗ್ಯ ಅಭ್ಯರ್ಥಿ ಹಾಗೂ ಸರಕಾರವನ್ನು ಆಯ್ಕೆ ಮಾಡಬೇಕು. ಆ ಮೂಲಕ ದೇಶಕಟ್ಟುವ ಪ್ರಕ್ರಿಯೆಯಲ್ಲಿ ನಿರ್ಣಾಯಕ ಪಾತ್ರವಹಿಸಬೇಕು ಎಂದರು.

ರಕ್ಷಿತಾ ಮಸೂತಿ ಪ್ರಾರ್ಥಿಸಿದರು. ಉಪನ್ಯಾಸಕಿ ಕೀರ್ತಿ ದಾಸರ ಸ್ವಾಗತಿಸಿದರು. ಉಪನ್ಯಾಸಕಿ ಎಸ್.ಎಸ್. ಕುಲಕರ್ಣಿ ಪ್ರತಿಜ್ಞಾವಿಧಿ ಬೋಧಿಸಿ ಕಾರ್ಯಕ್ರಮ ನಿರೂಪಿಸಿದರು. ಶ್ರೀಮತಿ ಎಸ್.ಪಿ.ದೇಶಪಾಂಡೆ ವಂದಿಸಿದರು.

# ಮಿತಿಮೀರಿದ ಸ್ಮಾರ್ಟ್ ಫೋನ್ ಬಳಕೆ ಆರೋಗ್ಯ ಹಾಗೂ ಜೀವನಕ್ಕೆ ಮಾರಕ.

ವೈದ್ಯರು ಹೇಳುವ ಪ್ರಕಾರ ಹೆಚ್ಚು ಹೊತ್ತು ಮೊಬೈಲ್ ವೀಕ್ಷಿಸುತ್ತಿದ್ದರೆ ಬಿ.ಪಿ ಹೆಚ್ಚಾಗುತ್ತದೆ, ಹಾಗೂ ಕಣ್ಣಿನ ನೋವು ಹಾಗೂ ದೃಷ್ಟಿದೋಷಕ್ಕೂ ಕಾರಣವಾಗುತ್ತದೆ ಎಂದು, ಇನ್ನೂ ಒಂದು ಹೆಜ್ಜೆ ಮುಂದೆ ಹೋಗಿ ಇತ್ತೀಚಿನ ಸಂಶೋಧನೆಯ ಪ್ರಕಾರ ಎಳೆ ವಯಸ್ಸಿನ ಮಕ್ಕಳು ಅತಿಯಾದ ಮೊಬೈಲ್ ವೀಕ್ಷಣೆಯಿಂದ ಅವರ ಮೂಳೆಗಳ ಸಾಂದ್ರತೆ ಕಡಿಮೆಯಾಗುತ್ತದೆ ಎಂಬ ವರದಿ ಬಹಿರಂಗಗೊಂಡಿದೆ.

ಅತಿಯಾದ ಮೊಬೈಲ್ ಬಳಕೆಯಿಂದ ಜೀವನಶೈಲಿಯ ಖಾಯಿಲೆಗಳಾದ ಬಿ ಪಿ, ಶುಗರ್, ನಿದ್ರಾಹೀನತೆ, ಬೊಜ್ಜು ಹಾಗೂ ದೃಷ್ಟಿ ದೋಷದ ಸಮಸ್ಯೆಗಳು ಹೆಚ್ಚಾಗುತ್ತವೆ ಎಂಬುದು ವೈದ್ಯಕೀಯ ವರದಿಗಳಿಂದ ಬಹಿರಂಗ ಗೊಂಡಿದೆ.

ಅತಿಯಾದ ಸ್ಮಾರ್ಟ್‌ಫೋನ್ ಬಳಕೆ, ರಿಲ್ಸ್ ಚಟದಿಂದ ಆಕರ್ಷಣೆ, ಪರಿಚಯ, ಪ್ರೀತಿ- ಪ್ರೇಮ, ಅನೈತಿಕ ಸಂಬಂಧ ದಿಂದ ಸಂಸಾರಗಳು ಮುರಿದು ಬೀಳುವುದರ ಜೊತೆಗೆ ಕೊನೆಗೆ ಕೆಲವರ ಜೀವವು ಅಂತ್ಯವಾಗಿರುವುದು ಕೆಲವು ನಿದರ್ಶನಗಳಿಂದ ಸಾಬೀತಾಗಿದೆ.

ಸುಮಾರು ಇಪ್ಪತ್ತು ಮೂವತ್ತು ವರ್ಷಗಳ ಹಿಂದೆ ಜನ ಐದರಿಂದ ಹತ್ತು ಕಿಲೋಮೀಟರ್‌ಗಳವರೆಗೂ ನಡೆದುಕೊಂಡೇ ಹೋಗುತ್ತಿದ್ದರು, ವೈಜ್ಞಾನಿಕವಾಗಿ ಅದು ಆರೋಗ್ಯದ ದೃಷ್ಟಿಯಿಂದ ಒಳ್ಳೆಯದೇ, ಹಾಗಾಗಿ ಅವರು ಹಲವು ವರ್ಷಗಳ ಕಾಲ ಯಾವುದೇ ಖಾಯಿಲೆಗಳಿಲ್ಲದೆ, ಆರೋಗ್ಯಕರವಾಗಿ ಜೀವನ ನಡೆಸುತ್ತಿದ್ದರು, ಆದರೆ ಇತ್ತೀಚಿನ ದಿನಗಳಲ್ಲಿ ಈಗ ಎಲ್ಲವೂ ಅಂಗೈಯಲ್ಲೇ ಸಿಗಬೇಕು ಎಂಬ ಆಕಾಂಕ್ಷೆಯಿಂದ, ಮನುಷ್ಯ ತಂತ್ರಜ್ಞಾನದ ಮೊರೆ ಹೋಗಿ ಸ್ಮಾರ್ಟ್ ಫೋನ್ ಗಳನ್ನು ಮಿತಿಮೀರಿ ಬಳಸುತ್ತಿದ್ದು,ಬೆಳಗಿನ ಅರ್ಧಗಂಟೆಯ ನಡಿಗೆಯನ್ನೂ ಸ್ಥಗಿತಗೊಳಿಸಿಕೊಳ್ಳುವುದರ ಜೊತೆಗೆ, ವ್ಯಾಯಾಮ, ದೈಹಿಕ ಚಟುವಟಿಕೆ, ಎಲ್ಲವನ್ನೂ ಮರೆತಿರುವ ಸಂದಿಗ್ಧ ಪರಿಸ್ಥಿತಿಗೆ ತಲುಪಿದ್ದಾನೆ, ಇದರಿಂದ ವ್ಯಾಯಮರಹಿತ ದೇಹಕ್ಕೆ ಹಲವಾರು ರೋಗಗಳು ಬಂದು, ಜೀವನದ ಸಂತೋಷವನ್ನು ಕಳೆದುಕೊಂಡು ಮನುಷ್ಯ ದೈಹಿಕ ಹಾಗೂ ಮಾನಸಿಕವಾಗಿ ವಿಷಮ ಪರಿಸ್ಥಿತಿಯಲ್ಲಿ ಬದುಕುವ ಸ್ಥಿತಿ ನಿರ್ಮಾಣವಾಗಿದೆ.

ಅತಿಯಾದ ಸ್ಮಾರ್ಟ್ ಫೋನ್ ಗೆ ಜೋತು ಬಿದ್ದಿರುವ ಕಾರಣಗಳಿಂದ ಹಾಗೂ ರಿಲ್ಸ್ ಪ್ರಭಾವಗಳಿಂದಲೂ ಮತ್ತು ಹೆಚ್ಚು ಲೈಕ್ಸ್‌ಗಳ ವ್ಯಾಮೋಹದಿಂದಲೂ ಸದಾ ಮೊಬೈಲ್ಗೆ ಅಂಟಿಕೊಂಡಿರುವುದರಿಂದ, ಮನುಷ್ಯ ಸಂಬಂಧ ಹಾಳಾಗಿ ವಸ್ತು ಸಂಬಂಧ ಏರ್ಪಟ್ಟು ರಸ್ತೆಯಲ್ಲಿ ಹಾಗೂ ಸುತ್ತಮುತ್ತ ಯಾವುದೇ ಅಪಘಾತ, ಅಥವಾ ಅಹಿತಕರ ಘಟನೆಗಳು ನಡೆದರೂ ಕೂಡ ಮಾನವೀಯತೆಗೆ ಸ್ಪಂದಿಸುವ ಬದಲು ವಿಡಿಯೋ ಮಾಡಿ ಅಪ್ಲೋಡ್ ಮಾಡಿ ವಿಕೃತತೆಯನ್ನು ಮೆರೆಯುವವರ ಸಂಖ್ಯೆ ಹೆಚ್ಚುತ್ತಿದೆ.

ತಂತ್ರಜ್ಞಾನ ಹಾಗೂ ಮೊಬೈಲ್ ಗೆ ಜೋತು ಬಿದ್ದ ಮನುಷ್ಯ ಆರೋಗ್ಯದ ದೃಷ್ಟಿಯಿಂದ ದೈಹಿಕ ಶ್ರಮವನ್ನೇ ಮರೆತಿದ್ದಾನೆ, ಇದಕ್ಕೆ ಉದಾಹರಣೆ ಎಂಬಂತೆ ಕೆಲ ದಿನಗಳ ಹಿಂದೆ ಕಾರ್ಪೊರೇಷನ್ ಹತ್ತಿರದ ಬನ್ನಪ್ಪ ಪಾರ್ಕ್ ಬಸ್ ನಿಲ್ದಾಣದಲ್ಲಿ ನಾನು ಒಬ್ಬ ಸ್ನೇಹಿತನನ್ನು ಕಾಯುತ್ತಾ ಬಸ್ ಸ್ಟ್ಯಾಂಡ್ ನಲ್ಲಿ ಕುಳಿತಿದ್ದೆ, ಆಗ ಅಲ್ಲಿ ಒಬ್ಬ ಮಧ್ಯ ವಯಸ್ಸಿನ ಮಹಿಳೆ ಒಬ್ಬರು ಅಲ್ಲಿಯೇ ಕುಳಿತಿದ್ದರು, ಹತ್ತು ನಿಮಿಷಗಳ ನಂತರ ನನಗೆ ಹೀಗೆ ಕೇಳಿದರು, ಇಲ್ಲಿಂದ ಮಾರ್ತಾಸ್ ಆಸ್ಪತ್ರೆಗೆ ಹೋಗಬೇಕಿದೆ ಎಂದು, ಆಗ ನಾನು ಹೇಳಿದೆ ಕೇವಲ ನಾಲ್ಕರಿಂದ ಐದು ನಿಮಿಷದ ನಡಿಗೆ ಅಷ್ಟೇ, ನೀವು ಬಸ್ಸಿಗಾಗಿ ಕಾಯ್ತಾ ಕುಳಿತಿರುವುದರ ಬದಲು ನಡೆದು-ಕೊಂಡೇ ಹೋಗಬಹುದು ಎಂದೆ, ಆಗ ಅವರು ಈಗೆಲ್ಲ ಯಾರಪ್ಪ ನಡೆಯುತ್ತಾರೆ, ನಡೆದಾಡುವುದನ್ನು ಬಿಟ್ಟು ನಾವು ಸುಮಾರು ವರ್ಷಗಳಾಯಿತು, ನಡೆದಾಡುವ ಅಭ್ಯಾಸಗಳು ಸಹ ನಮಗೆ ಮರೆತೇ ಹೋಗಿವೆ, ಎಂದರು..

ಒಂದು ನಿಲ್ದಾಣದಿಂದ ಇನ್ನೊಂದು ನಿಲ್ದಾಣಕ್ಕೂ ಅಥವಾ ಐದು ನಿಮಿಷದ ಕಾಲ್ನಡಿಗೆಯ ಮಾರ್ಗಕ್ಕೂ ಆಟೋ, ಕ್ಯಾಬ್ಗಳನ್ನು ಅವಲಂಬಿಸಿರುವ ಜನ ಆಧುನಿಕತೆಯ ಹೆಸರಿನಲ್ಲಿ ದೈಹಿಕ ಚಟುವಟಿಕೆಗಳಿಂದ ಆಗುವ ಪ್ರಯೋಜನಗಳನ್ನು ಮರೆತು ಕಾಯಿಲೆಗಳಿಗೆ ತುತ್ತಾಗುತ್ತಿರುವುದು ನಿಜಕ್ಕೂ ಬೇಸರದ ಸಂಗತಿ.

ಹಾಗಾಗಿ ಅತಿಯಾದರೆ ಅಮೃತವು ವಿಷ ಯಾವುದನ್ನೂ ಅತಿಯಾಗಿ ಹಚ್ಚಿಕೊಂಡರೂ ಅದರಿಂದ ದುಷ್ಪರಿಣಾಮವೇ ಹೆಚ್ಚು, ಅನುಕೂಲತೆಗಳಿಗಿಂತ ಅನಾನುಕೂಲತೆಗಳೇ ಹೆಚ್ಚು ಎಂಬುದನ್ನು ಮರೆಯಬಾರದು.

ಮೊಬೈಲ ತಂತ್ರಜ್ಞಾನಗಳ ಬಳಕೆಯಿಂದ ಮನುಷ್ಯ ತನಗೆ ಅವಶ್ಯಕ ವಸ್ತುಗಳ ತರುವಲ್ಲಿ ಅಂಗಡಿಗಳಿಗೂ ಹೋಗುವುದನ್ನ ಬಿಟ್ಟಿದ್ದಾನೆ, ಊಟಕ್ಕಾಗಿ ಹೋಟೆಲ್ ಗಳಿಗೂ ಹೋಗುವುದರ ಬಿಟ್ಟಿದ್ದಾನೆ. ಅಷ್ಟೇ ಅಲ್ಲದೆ ಮನೆಯಲ್ಲಿಯೂ ಕೂಡ ಅಡುಗೆ ಮಾಡುವ ಕಾರ್ಯವನ್ನು ನಿಲ್ಲಿಸಿ ಆನ್ಲೈನ್ ನಲ್ಲಿ ಸ್ವಿಗ್ಗಿ,ಝೋಮ್ಯಾಟೋ ಮುಂತಾದ ಪಾರ್ಸಲ್ ಆರ್ಡರ್ ಗಳ ಮೂಲಕ ಊಟವನ್ನು ತಿನ್ನುತ್ತಿದ್ದಾನೆ, ಅಂದರೆ ಎಲ್ಲವೂ ಸಹ ಕುಳಿತಲ್ಲಿಯೇ ಬೇಕು ಎನ್ನುವ ಹಪಾಪಿತನದಿಂದಾಗಿ ಮುಂದಿನ ದಿನಗಳಲ್ಲಿ ಹೋಟೆಲ್ ಹಾಗೂ ಮಾಲ್ಗಳಿಗೂ ಭೇಟಿ ನೀಡುವುದನ್ನು ನಿಲ್ಲಿಸುವ ಸಂಭವ ಬರದೇ ಇರುವುದಿಲ್ಲ.

ಇವೆಲ್ಲ ಕಾರಣಗಳಿಂದ ಹಲವಾರು ಸಣ್ಣ ಸಣ್ಣ ಅಂಗಡಿಗಳು ಈಗಾಗಲೇ ಮುಚ್ಚಿಹೋಗಿವೆ,ಎಲ್ಲವನ್ನೂ ಕುಳಿತಲ್ಲಿಯೇ ಬಯಸುವ, ದೈಹಿಕ ಚಟುವಟಿಕೆಗಳ ಕೊರತೆಯಿಂದಾಗಿ ಕೊನೆಗೆ ಮನುಷ್ಯ ಬರಬಾರದ ರೋಗಗಳಿಗೆ ತುತ್ತಾಗಿ ಸಾಯುವ ಪರಿಸ್ಥಿತಿಯನ್ನು ತಂದುಕೊಳ್ಳುತ್ತಿರುವುದು ಒಂದು ದುರಂತ ಎಂದು ಹೇಳಬಹುದಾಗಿದೆ. ಹಾಗಾಗಿ ಹೆಚ್ಚು ಸ್ಮಾರ್ಟ್ ಫೋನ್ ಮೊಬೈಲ್ಗಳ ಅತಿಯಾದ ಬಳಕೆಯಿಂದ ಹೊರಬಂದು ಜೀವನದ ಸಹಜ ಸ್ಥಿತಿಗೆ ಮರಳಿದರೆ ಸ್ವಲ್ಪ ದಿನಗಳ ಕಾಲವಾದರೂ ಆರೋಗ್ಯದಿಂದ ಬಾಳಬಹುದಾಗಿದೆ.

**– ಡಾ. ಸತ್ಯಮೂರ್ತಿ ಗೂಗಿ ಚಿಂತಕರು, ಬೆಂಗಳೂರು**

**"SIHI KAHI"** Kannada Daily Morning, Editor, Owner, Publisher, Printer by **MARUTI BASAVANTAPPA HOASAMANI** Published from Chittaragi Cross, S.C. Colony, Ward No. 9, Amingada-587112, Tq. Hungund Dist : Bagalkot, Karnataka and Printed at **SUDIN PRINTERS**, Sector No. 33, Shop No. 38 & 40, Opp. Ambedkar Bhavan, **NAVANAGAR, BAGALKOT-587 101.** Dist : Bagalkot, Karnataka State